ಸಂಪುಟ 01 । ಸಂಚಿಕೆ 241 ಗುರುವಾರ 05 ನವೆಂಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ಸುನಾಮಿ ಜಾಗೃತಿ ದಿನ (World Tsunami Awareness Day): ಸುನಾಮಿ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅಪಾಯ ತಡೆಗಟ್ಟುವ ಕ್ರಮಗಳ ಬಗ್ಗೆ ಜನರಿಗೆ ತಿಳಿಸಲು ಈ ದಿನವನ್ನು ಆಚರಿಸಲಾಗುತ್ತದೆ.

2)ವಿಶ್ವ ರೇಡಿಯಾಗ್ರಫಿ ದಿನ (World Radiography Day): 1895ರಲ್ಲಿ ವಿಲ್ಹೆಲ್ಮ್ ರೋಂಟ್ಜೆನ್ ಅವರು ಎಕ್ಸ್-ಕಿರಣಗಳನ್ನು (ಫಿ-ಡಿಚಿಥಿ) ಆವಿಷ್ಕರಿಸಿದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.

3)ಜೆ.ಬಿ.ಎಸ್. ಹಾಲ್ಡೇನ್ ಜನ್ಮದಿನ: ಪ್ರಸಿದ್ಧ ಬ್ರಿಟಿಷ್-ಭಾರತೀಯ ಜೀವಶಾಸ್ತ್ರಜ್ಞ ಮತ್ತು ವಿಕಸನೀಯ ಜೀವಶಾಸ್ತ್ರದ ವಿಜ್ಞಾನಿ ಜೆ.ಬಿ.ಎಸ್. ಹಾಲ್ಡೇನ್ ಅವರು 1892ರ ನವೆಂಬರ್ 5ರಂದು ಜನಿಸಿದರು.

4) ಐತಿಹಾಸಿಕ ಘಟನೆ – ಪಾಣಿಪತ್ ಎರಡನೇ ಯುದ್ಧ (1556): 1556ರ ನವೆಂಬರ್ 5 ರಂದು ಅಕ್ಬರನ ಸೈನ್ಯ ಮತ್ತು ಹೇಮು (ಹೇಮಚಂದ್ರ ವಿಕ್ರಮಾದಿತ್ಯ) ನಡುವೆ ಪ್ರಸಿದ್ಧವಾದ ಪಾಣಿಪತ್‌ನ ಎರಡನೇ ಯುದ್ಧ ನಡೆಯಿತು.

5) ಅಂತರರಾಷ್ಟ್ರೀಯ ಆಚರಣೆಗಳು: ಬ್ರಿಟನ್‌ನಲ್ಲಿ ಗೈ ಫಾಕ್ಸ್ ನೈಟ್ (Guy Fawkes Night) ಹಾಗೂ ರಾಷ್ಟ್ರೀಯ ರೆಡ್‌ಹೆಡ್ ದಿನ (National Redhead Day) ಆಚರಿಸಲಾಗುತ್ತದೆ.

ಸುಭಾಷಿತ

ಶಿಕ್ಷಣದ ಬೇರುಗಳು ಕಹಿ ಇರಬಹುದು,
ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ

–ಅರಿಸ್ಟಾಟಲ್

ಹಿರಿಯೂರು ನಗರಕ್ಕೆ 100 ಕೋಟಿ ವೆಚ್ಚದ ಸಮಗ್ರ ಒಳಚರಂಡಿ ಯೋಜನೆಗೆ ಶಂಕುಸ್ಥಾಪನೆ!

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ ನವಂಬರ್ 4ನಗರಾಭಿವೃದ್ಧಿ ಇಲಾಖೆ ವತಿಯಿಂದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದ ದಕ್ಷಿಣ ಭಾಗಕ್ಕೆ ಸಮಗ್ರ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಮಹತ್ವಾಕಾಂಕ್ಷಿ ಯೋಜನೆಯ ಮೊದಲ ಹಂತದ ಕಾಮಗಾರಿಗೆ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ನಗರಾಭಿವೃದ್ಧಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಒಟ್ಟು ರೂ 100 ಕೋಟಿ ಕಾಮಗಾರಿಗೆ ಶಂಕುಸ್ಥಾಪನೆ

ಭೂಮಿ ಪೂಜೆ ನೆರವೇರಿಸಿದರು ಇದೆ ವೇಳೆ ಸಮಾರಂಭದಲ್ಲಿ ಮಾತನಾಡಿದ ನಗರಾಭಿವೃದ್ಧಿ ಸಚಿವರಾದ ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯನವರು ಹಿರಿಯೂರು ನಗರದ ಕೊಳಚೆ ನೀರು ವೇದಾವತಿ ನದಿಗೆ ಸೇರುತ್ತಿರುವುದನ್ನು ತಡೆದು, ಒಳಚರಂಡಿ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ನಂತರ ವಿಲೇವಾರಿ ಮಾಡುವ ಮೂಲಕ ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಯೋಜನೆಯಿಂದ ನಗರದ ಸ್ವಚ್ಛತೆ, ನೈರ್ಮಲ್ಯ ಮತ್ತು ಜನರ ಜೀವನಮಟ್ಟ ಸುಧಾರಣೆಯಾಗಲಿದೆ. ಎಂದು ಸಚಿವರು ಹೇಳಿದರು ಈ ಮಹತ್ವದ ಕಾಮಗಾರಿಗಾಗಿ ನಿರಂತರವಾಗಿ ಪ್ರಯತ್ನಿಸಿದ್ದ ದಿವಂಗತ ಮಾಜಿ ಸಚಿವರಾದ



ಡಿ. ಸುಧಾಕರ್ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಿ ಈ ಯೋಜನೆಯ ಶ್ರೇಯಸ್ಸು ಅವರಿಗೆ ಸಲ್ಲಬೇಕು ಎಂದು ಸಚಿವರು ಸ್ಮರಿಸಿಕೊಂಡರು ನಿಕಟ ಪೂರ್ವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲೇ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದ್ದೇವೆ.

ಇದೀಗ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬಂದ ಮೇಲೆ 6ನೇ ಗ್ಯಾರಂಟಿಯಾಗಿ ಭೂಮಿ ಗ್ಯಾರಂಟಿ ಕೊಟ್ಟಿದ್ದಾರೆ. ಜೊತೆಗೆ ಯುವಜನರ ಅಭಿವೃದ್ಧಿ ಹಾಗೂ ಸಬಲೀಕರಣಕ್ಕಾಗಿ ಹೊಸ ಉಪಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ. ಯುವಜನರ ಭವಿಷ್ಯಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಭಾರತ್ ಜೂಡೋ ಯುವ ಸಂಘಟನೆಗಳ ಸ್ಥಾಪಿಸಿ ಅವುಗಳಿಗೆ ?1,000 ಕೋಟಿ ಅನುದಾನ ಒದಗಿಸುವ ಮಹತ್ವದ ಇಂದಿನ ಯುವ ಜನತೆಗೆ ವರದಾನವಾಗಲಿದೆ ಎಂದು ಸಚಿವರು ಹೇಳಿದರು ಕಾರ್ಯಕ್ರಮದಲ್ಲಿ ಪಟ್ಟನಾಯಕನಹಳ್ಳಿಯ ಶ್ರೀ ಸ್ಪಟಿಕಪುರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಂಜಾವಧೂತ ಮಹಾಸ್ವಾಮೀಜಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಟಿ. ರಘುಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಕೆ. ಎಚ್. ಮುನಿಯಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಈಶ್ವರ ಖಂಡ್ರೆ, ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಕೆ.ಎಸ್. ಬಸವಂತಪ್ಪ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಅಜಯ್ ಸಿಂಗ್, ಪೌರಾಡಳಿತ ಇಲಾಖೆಯ ಸಚಿವರಾದ ಹೆಚ್.ಸಿ. ಬಾಲಕೃಷ್ಣ, ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿಗಳಾದ ಟಿ.ಬಿ. ಜಯಚಂದ್ರ, ಶಾಸಕರಾದ ಡಾ. ಕುಣಿಗಲ್ ರಂಗನಾಥ್, ವೀರೇಂದ್ರ ಪಪ್ಪಿ, ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಮಾಜಿ ಸಚಿವರಾದ ಎಚ್. ಆಂಜನೇಯ, ಮಾಜಿ ಸಂಸದರಾದ ಬಿ.ಎನ್. ಚಂದ್ರಪ್ಪ, ಮಾಜಿ ಶಾಸಕಿ ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್, ದ್ರಾಕ್ಷಿ ಮಂಡಳಿ ಅಧ್ಯಕ್ಷರಾದ ಜಿ. ಯೋಗೇಶ್ ಬಾಬು, ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಜಿ.ಎಸ್. ಮಂಜುನಾಥ್, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಪಿ. ರಘು, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಹೆಚ್.ಟಿ. ಮಂಜಪ್ಪ, ಭೋವಿ ನಿಗಮದ ಅಧ್ಯಕ್ಷರಾದ ಶ್ರೀ ರಾಮಪ್ಪ, ಕಾಡುಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಹೇಶ್ ಹಾರೋಗೆರೆ, ಕಾಂಗ್ರೆಸ್ ಮುಖಂಡರಾದ ಸುಹಾಸ್ ಸುಧಾಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಕೆ. ತಾಜ್ ಪೀರ್ ಸೇರಿದಂತೆ ಈ ಭಾಗದ ಮುಖಂಡರು ಸಾರ್ವಜನಿಕರು ಸಮಾರಂಭದಲ್ಲಿ ಭಾಗಿಯಾಗಿದ್ದರು

ಅಂಗನವಾಡಿ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹ : ನ.29ರಂದು 'ದೆಹಲಿ ಚಲೋ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಅಂಗನವಾಡಿ ನೌಕರರ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ನವೆಂಬರ್ 29ರಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ತಾಲೂಕಿನಿಂದ 25ರಿಂದ 30 ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ತಾಲೂಕು ಸಮಿತಿ ತಿಳಿಸಿದೆ.

ಪಟ್ಟಣದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ (ಸಿಡಿಪಿಒ) ಮನವಿ ಪತ್ರ ಸಲ್ಲಿಸಿ ಮಾತನಾಡಿದ ಮುಖಂಡರು, ನೌಕರರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹಲವು ವರ್ಷಗಳಿಂದ



ನಿರಂತರ ಹೋರಾಟ ನಡೆಸುತ್ತಿದ್ದರೂ ಸರ್ಕಾರಗಳು ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಹೀಗಾಗಿ ರಾಷ್ಟ್ರಮಟ್ಟದಲ್ಲಿ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಲಾಗಿದ್ದು, ತಾಲೂಕಿನಿಂದ ಹೆಚ್ಚಿನ ಸಂಖ್ಯೆಯ ನೌಕರರು ದೆಹಲಿಗೆ ತೆರಳಲಿದ್ದಾರೆ ಎಂದರು. ದೀಪಾವಳಿ ಹಬ್ಬ ಸಮೀಪಿಸುತ್ತಿದ್ದರೂ ಅಂಗನವಾಡಿ ನೌಕರರಿಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳ ಗೌರವಧನ ಇನ್ನು ತಲುಪಿಲ್ಲ.

ಹಬ್ಬದ ಸಂದರ್ಭದಲ್ಲೇ ಗೌರವಧನ ವಿಳಂಬ ವಾಗುತ್ತಿರುವುದರಿಂದ ನೌಕರರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಆದ್ದರಿಂದ ಸರ್ಕಾರ ತಕ್ಷಣವೇ ಬಾಕಿ ಇರುವ ಗೌರವಧನವನ್ನು ಬಿಡುಗಡೆ ಮಾಡಿ ನೌಕರರ ನೆರವಿಗೆ ಬರಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಜಂಟಿ ಕಾರ್ಯದರ್ಶಿ ರಮೇಶ್ ವೀರಾಪೂರು, ತಾಲೂಕು ಅಧ್ಯಕ್ಷೆ ಬಸಮ್ಮ ಮುದಗಲ್, ಉಪಾಧ್ಯಕ್ಷೆ ಲಕ್ಷ್ಮೀ ಎಸ್. ನಗನೂರು, ಪ್ರಧಾನ ಕಾರ್ಯದರ್ಶಿ ಸರಸ್ವತಿ ಬಿ. ಈಚನಾಳ, ಖಜಾಂಚಿ ಸುಜಾತ ಲಿಂಗಸುಗೂರು ಹಾಗೂ ಮಲ್ಲನಗೌಡ ಮುದಗಲ್ ಸೇರಿದಂತೆ ವಿವಿಧ ಕೇಂದ್ರಗಳ ನೌಕರರು ಹಾಜರಿದ್ದರು.


ಬಡವರ ಸಬಲೀಕರಣಕ್ಕೆ ಧರ್ಮಸ್ಥಳ ಸಂಸ್ಥೆ ಶ್ರಮ ಶ್ಲಾಘನೀಯ: ಶಾಸಕ ಗಣೇಶ್

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: "ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಜಾರಿಯಲ್ಲಿರುವ ಸಮಾಜಮುಖಿ ಹಾಗೂ ಆರ್ಥಿಕ ಕಾರ್ಯಕ್ರಮಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು" ಎಂದು ಶಾಸಕ ಜೆ.ಎನ್. ಗಣೇಶ್ ಕರೆ ನೀಡಿದರು.

ಪಟ್ಟಣದ ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್, ಸಹಸ್ರ ಬಿಲ್ವಾರ್ಚನ ಪೂಜಾ ಸಮಿತಿ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಹಸ್ರ ಬಿಲ್ವಾರ್ಚನೆ ಪೂಜೆ ಮತ್ತು ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಡವರ ಆರ್ಥಿಕ ಸಬಲೀಕರಣ, ಮಹಿಳೆಯರ ಸ್ವಯಂ ಉದ್ಯೋಗ ಹಾಗೂ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಧರ್ಮಸ್ಥಳ ಸಂಸ್ಥೆ ನೀಡುತ್ತಿರುವ ಕೊಡುಗೆ ಅಪಾರ ಎಂದರು.

ಹೆಚ್. ವೀರಾಪುರದ ಜಡೇಶಿವಯೋಗಿ ಮಠದ ಶ್ರೀ ಜಡೇಶ ತಾತನವರು ಆಶೀರ್ವಚನ ನೀಡಿ,



"ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರುವಲ್ಲಿ ಸಂಸ್ಥೆಯ ನಿಸ್ವಾರ್ಥ ಸೇವೆ ಶ್ಲಾಘನೀಯ" ಎಂದರು.

ಪ್ರಾದೇಶಿಕ ನಿರ್ದೇಶಕ ಜೆ. ಚಂದ್ರಶೇಖರ್ ಮಾತನಾಡಿ, ಸ್ಥಳೀಯ ಮಲ್ಲಪ್ಪನ ಕೆರೆ ಅಭಿವೃದ್ಧಿಗೆ ಸಂಸ್ಥೆ ಕೈಜೋಡಿಸಿದೆ. ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ರಾಜ್ಯದ 17 ಸಾವಿರ ದೇವಸ್ಥಾನಗಳ ಪುನರ್ ನಿರ್ಮಾಣಕ್ಕೆ ಲಕ್ಷಾಂತರ ರೂ. ಅನುದಾನ ನೀಡಿದ್ದಾರೆ ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ ಫಲಾನುಭವಿಗಳಿಗೆ 'ಆರೋಗ್ಯ ರಕ್ಷಾ' ವಿಮೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕ ರೋಹಿತಾಕ್ಷ, ಯೋಜನಾಧಿಕಾರಿ ಎಲ್. ರಾಘವೇಂದ್ರ, ಪುರಸಭೆ ಅಧ್ಯಕ್ಷ ಮಂಜುನಾಥ್, ಉಪಖಜಾನಾಧಿಕಾರಿ ಪಿ. ಅಲ್ಲಾಭಕ್ಷ, ಕೃಷಿ ವಿಭಾಗದ ಅಧಿಕಾರಿ ಎಸ್. ಬಿ. ಸಂಜೀವ್ಕುಮಾರ್ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಪುರೋಹಿತರಾದ ಧನುಂಜಯ ಸ್ವಾಮಿ ಹಾಗೂ ಬಸವರಾಜ ಸ್ವಾಮಿ ನೇತೃತ್ವದಲ್ಲಿ ಬಿಲ್ವಾರ್ಚನೆ ಪೂಜೆ ನೆರವೇರಿತು.

ಕನ್ನಡ ರಾಜ್ಯೋತ್ಸವ ಆಚರಣೆಯಲ್ಲಿ ನಿರ್ಲಕ್ಷ್ಯ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸಮಾಜ ಸೇವಾ ಕಾರ್ಯಕರ್ತರ ವೇದಿಕೆ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಕರ್ನಾಟಕ ಸರ್ಕಾರದ ಕಡ್ಡಾಯ ಆದೇಶವಿದ್ದರೂ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಸಕಾಲದಲ್ಲಿ ಆಚರಿಸದೆ ಮತ್ತು ಸಂಪೂರ್ಣವಾಗಿ ಗೈರುಹಾಜರಾಗಿ ನಿರ್ಲಕ್ಷ್ಯ ವಹಿಸಿರುವ ಕಚೇರಿಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸಿರಸ್ತೆದಾರ್ ಪಂಪಾಪತಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸಮಾಜ ಸೇವಾ ಕಾರ್ಯಕರ್ತರ ವೇದಿಕೆಯ ರಾಜ್ಯ ಕಾರ್ಯಾಧ್ಯಕ್ಷರಾದ ಟಿ.ಹೆಚ್.ಎಂ. ರಾಜಕುಮಾರ್ ಹಾಗೂ ಕಂಪ್ಲಿ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್. ಗೋಪಾಲ್ ಅವರ ನೇತೃತ್ವದಲ್ಲಿ ಈ ದೂರು ನೀಡಲಾಯಿತು. ಸರ್ಕಾರದ ಆದೇಶ ಉಲ್ಲಂಘನೆ: ದಿನಾಂಕ 01–11–2026 ರಂದು ರಾಜ್ಯ ಸರ್ಕಾರದ ಸ್ಪಷ್ಟ ಆದೇಶದಂತೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಕಡ್ಡಾಯವಾಗಿ ಆಚರಿಸಬೇಕಾಗಿತ್ತು.

ಆದರೆ, ಕಂಪ್ಲಿಯ ಕರ್ನಾಟಕ ನೀರಾವರಿ ನಿಗಮ ನಿಯಮಿತ ನಂ. 1 ಕಾಲುವೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅತ್ಯಂತ ತಡವಾಗಿ ಧ್ವಜಾರೋಹಣ ನೆರವೇರಿಸಿದ್ದಾರೆ. ಇನ್ನು ಸೋಮಪ್ಪ ಕೆರೆ ಆವರಣದ ಅನಧಿಕೃತ ಕಟ್ಟಡದಲ್ಲಿರುವ ಗ್ರಂಥಾಲಯದ ಮೇಲ್ವಿಚಾರಕರು, ಅಧಿಕಾರಿಗಳು ಮತ್ತು ಸಿಬ್ಬಂದಿ ಧ್ವಜಾರೋಹಣವನ್ನೂ ಮಾಡದೆ, ಆಚರಣೆಯನ್ನೂ ನಡೆಸದೆ ಸರ್ಕಾರದ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ ಎಂದು ವೇದಿಕೆಯ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ಅಸ್ಮಿತೆಗೆ ಅಪಚಾರ: ರಾಜ್ಯದ ಅಸ್ಮಿತೆಯಾದ ಕನ್ನಡ ರಾಜ್ಯೋತ್ಸವದ ದಿನದಂದೇ ಕಚೇರಿಗೆ ಗೈರುಹಾಜರಾಗಿ, ಬೇಜವಾಬ್ದಾರಿತನ ಪ್ರದರ್ಶಿಸಿರುವ ಅಧಿಕಾರಿಗಳ ನಡೆ ಕನ್ನಡ ಭಾಷೆ, ನಾಡು ಹಾಗೂ ಸರ್ಕಾರಿ ನಿಯಮಾವಳಿಗಳಿಗೆ ಮಾಡಿದ ಅಪಚಾರವಾಗಿದೆ. ಸಾರ್ವಜನಿಕ





ಹಿತದೃಷ್ಟಿಯಿಂದ ಸರ್ಕಾರದ ಆದೇಶವನ್ನು ಉಲ್ಲಂಘಿಸಿದ ಸದರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಸೂಕ್ತ ಇಲಾಖಾ ವಿಚಾರಣೆ ನಡೆಸಿ, ಕಠಿಣ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ರೈತರ ಹಿತದೃಷ್ಟಿಯಿಂದ ತುಂಗಭದ್ರಾ ಎಡದಂಡೆ ಕಾಲುವೆಗೆ ಹೆಚ್ಚುವರಿ 3 ಟಿಎಂಸಿ ನೀರು ಹರಿಸಲು ಮುಖ್ಯಮಂತ್ರಿಗಳಿಗೆ ಮನವಿ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ತುಂಗಭದ್ರಾ ಜಲಾಶಯದಲ್ಲಿ ಆಂಧ್ರಪ್ರದೇಶದ ಪಾಲಿಗೆ ನಿಗದಿಯಾಗಿರುವ 3 ಟಿಎಂಸಿ ನೀರನ್ನು ಹೆಚ್ಚುವರಿಯಾಗಿ ತುಂಗಭದ್ರಾ ಎಡದಂಡೆ ಕಾಲುವೆಗೆ ಹರಿಸುವ ಮೂಲಕ ರಾಯಚೂರು ಹಾಗೂ ಕೊಪ್ಪಳ ಭಾಗದ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿ ಮಾನ್ಯ ಡಿ ಕೆ ಶಿವಕುಮಾರ್ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಲಾಯಿತು.

ರಾಜ್ಯದ ರೈತರ ಹಿತಾಸಕ್ತಿ ಹಾಗೂ ಕೃಷಿ ಚಟುವಟಿಕೆಗಳಿಗೆ ಆದ್ಯತೆ ನೀಡುವ ಉದ್ದೇಶದಿಂದ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ಅವರ ಸಹಕಾರದೊಂದಿಗೆ ಶಾಸಕರಾದ ಹಂಪನಗೌಡ ಬಾದರ್ಲಿ, ಬಿ. ನಾಗೇಂದ್ರ, ಆರ್. ಬಸನಗೌಡ ತುರ್ವಿಹಾಳ, ಬಸನಗೌಡ



ಬಾದರ್ಲಿ, ಬಿ.ಎಂ. ನಾಗರಾಜ್, ಗವಿಯಪ್ಪ, ಮುಖಂಡರಾದ ರವಿ ಬೋಸರಾಜು ಸೇರಿದಂತೆ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ವಿಸ್ತೃತವಾಗಿ ಚರ್ಚಿಸಿತು. ತುಂಗಭದ್ರಾ ಎಡದಂಡೆ ಕಾಲುವೆಯ ನೀರನ್ನು ಅವಲಂಬಿಸಿ ರಾಯಚೂರು ಜಿಲ್ಲೆಯ ಸಿಂಧನೂರು, ಮಾನ್ವಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ ಹಲವು ಭಾಗಗಳ ಸಾವಿರಾರು ರೈತ ಕುಟುಂಬಗಳು ಕೃಷಿ ಚಟುವಟಿಕೆ ನಡೆಸುತ್ತಿವೆ. ಈ ಭಾಗದ ರೈತರ ಬದುಕು ಸಂಪೂರ್ಣವಾಗಿ ನೀರಾವರಿ ವ್ಯವಸ್ಥೆಯ ಮೇಲೆ ಅವಲಂಬಿತವಾಗಿದೆ. ಸಮಯಕ್ಕೆ ಸರಿಯಾಗಿ ಸಮರ್ಪಕ ಪ್ರಮಾಣದ ನೀರು ದೊರೆಯದಿದ್ದರೆ ಬೆಳೆಗಳ ಮೇಲೆ ಪರಿಣಾಮ ಬೀರುವುದರ ಜೊತೆಗೆ ರೈತರು ಆರ್ಥಿಕ ಸಂಕಷ್ಟ ಎದುರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದಲ್ಲಿನ ಆಂಧ್ರಪ್ರದೇಶದ ಪಾಲಿನ 3 ಟಿಎಂಸಿ ನೀರನ್ನು ರೈತರ ಕೃಷಿ ಅಗತ್ಯತೆಗಳಿಗೆ ಅನುಗುಣವಾಗಿ ತುಂಗಭದ್ರಾ ಎಡದಂಡೆ ಕಾಲುವೆಗೆ ಹರಿಸುವ ಕುರಿತು ಸರ್ಕಾರ ವಿಶೇಷ ಗಮನಹರಿಸಬೇಕು ಎಂದು ನಿಯೋಗ ಒತ್ತಾಯಿಸಿತು. ನಿಯೋಗದ ಮನವಿಯನ್ನು ಆಲಿಸಿದ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ರೈತರ ನೀರಿನ ಅಗತ್ಯತೆ ಮತ್ತು ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

ರೈತರ ಬದುಕು, ಕೃಷಿ ಹಾಗೂ ನೀರಾವರಿ ಹಿತಾಸಕ್ತಿಯನ್ನು ಕಾಪಾಡುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ರೈತರೊಂದಿಗೆ ನಾವಿದ್ದೇವೆ. ಯಾವುದೇ ಸಂದರ್ಭದಲ್ಲೂ ರೈತರನ್ನು ಸಂಕಷ್ಟದಲ್ಲಿ ಕೈಬಿಡುವುದಿಲ್ಲ. ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ.

ತುಂಗಭದ್ರಾ ಎಡದಂಡೆ ಕಾಲುವೆಯ ನೀರಿನ ವಿಚಾರದಲ್ಲಿ ಸರ್ಕಾರ ಸೂಕ್ತ ನಿರ್ಧಾರ ಕೈಗೊಂಡರೆ ಸಾವಿರಾರು ರೈತ ಕುಟುಂಬಗಳಿಗೆ ಅನುಕೂಲವಾಗಲಿದ್ದು, ಈ ಭಾಗದ ಕೃಷಿ ಚಟುವಟಿಕೆಗಳಿಗೆ ಹೊಸ ಆಶಾಭಾವನೆ ಮೂಡಲಿದೆ ಎಂಬ ನಿರೀಕ್ಷೆ ರೈತರಲ್ಲಿ ವ್ಯಕ್ತವಾಗಿದೆ.

ಸಾಹಿತ್ಯ ಸಿಂಚನ

ಕಣ್ಣೀರಿನ ಅಕ್ಷರಗಳು

ಕಣ್ಣೀರಿನ ಹನಿಯಲ್ಲಿ ಅಕ್ಷರಗಳು ಮೂಡಿದವು,
ಮೌನದ ಪುಟದಲ್ಲಿ ನೋವುಗಳು ಬರೆದವು.
ಹೇಳಲಾಗದ ಮಾತುಗಳು ಕಣ್ಣಲ್ಲಿ ಉಳಿದವು,
ಹೃದಯದ ಭಾವನೆಗಳು ಹನಿಯಾಗಿ ಹರಿದವು.

ನಗುವಿನ ಹಿಂದೆ ಮರೆತ ಕಥೆಯೊಂದು,
ಕಣ್ಣೀರಿನ ಸಾಲಿನಲ್ಲಿ ಬರೆದ ಕವಿತೆಯೊಂದು.
ಮೌನವೇ ಲೇಖನಿಯಾಗಿ, ನೋವೇ ಮಸಿಯಾಗಿ,
ಮನದ ಪುಟಗಳು ತೇವವಾದವು ನಿಧಾನವಾಗಿ.

ಕಳೆದುಹೋದ ಕ್ಷಣಗಳ ನೆನಪುಗಳು ಬಂದಾಗ,
ಕಣ್ಣಂಚಿನಲ್ಲಿ ಪದಗಳ ಮಳೆ ಸುರಿಯಿತು.
ಪ್ರತಿ ಹನಿಯೂ ಒಂದು ಕಥೆ ಹೇಳಿತು,
ಪ್ರತಿ ಅಕ್ಷರವೂ ಒಂದು ನೋವು ಹೊತ್ತಿತು.

ಕಣ್ಣೀರು ದುರ್ಬಲತೆಯ ಗುರುತು ಅಲ್ಲ,
ಅದು ಮನದೊಳಗಿನ ಸತ್ಯದ ಬೆಳಕು.
ಹರಿದ ಹನಿಗಳ ನಡುವೆ ಆಶೆಯೊಂದು ಹುಟ್ಟಿ,
ಮತ್ತೆ ನಗುವಿನ ಅಕ್ಷರ ಬರೆಯಲು ಕಲಿಸಿತು.

ನೋವಿನ ನೆರಳು ನಿಧಾನವಾಗಿ ಮಾಸಿದಾಗ,
ಹೊಸ ಕನಸುಗಳು ಹೃದಯದಲ್ಲಿ ಅರಳಿದವು.
ಕಣ್ಣೀರಿನಿಂದ ತೇವವಾದ ಆ ಪುಟಗಳ ಮೇಲೆ,
ಜೀವನ ಮತ್ತೆ ಸುಂದರ ಕವಿತೆಯಾಯಿತು.

ಸ್ವಾವಲಂಬಿ ಬದುಕಿಗೆ ಹೊಲಿಗೆ ತರಬೇತಿ ಪೂರಕ: ಎಲ್. ರಾಘವೇಂದ್ರ

❑ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಎಮ್ಮಿಗನೂರು ವಲಯದ ಸ್ವಾವಲಂಬಿ ಹಾಗೂ ಗೌರವದ ಬದುಕನ್ನು ಕಟ್ಟಿಕೊಳ್ಳಲು ಮಹಿಳೆಯ-ರಿಗೆ ಹೊಲಿಗೆ ತರಬೇತಿಯು ಅತ್ಯಂತ ಸಹಕಾರಿಯಾಗಿದೆ ಎಂದು ಅಕ್ಕನ ಬಳಗದ ಪುಷ್ಪ ಅವರು ತಿಳಿಸಿದರು. ವಲಯದ ಕೊಟ್ಟಲ್ ಕಾರ್ಯಕ್ಷೇತ್ರದ ಸೀತಾರಾಮ



ಜ್ಞಾನವಿಕಾಸ ಕೇಂದ್ರದ ಸದಸ್ಯರಿಗಾಗಿ ಹಮ್ಮಿಕೊಳ್ಳಲಾಗಿದ್ದ ಹೊಲಿಗೆ ತರಬೇತಿ ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಂತರ ಮಾತನಾಡಿದ ತಾಲೂಕು ಯೋಜನಾಧಿಕಾರಿ ಎಲ್. ರಾಘವೇಂದ್ರ ಅವರು, "ಹೊಲಿಗೆ ತರಬೇತಿಯು ಮಹಿಳೆಯರು ಮನೆಯಲ್ಲೇ ಸಣ್ಣಪುಟ್ಟ ಸ್ವ-ಉದ್ಯೋಗ ಆರಂಭಿಸಲು ಪೂರಕವಾದ ಮಾರ್ಗವಾಗಿದೆ. ಇದು ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢರನ್ನಾಗಿ ಮಾಡಲು ಹಾಗೂ ಅವರ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುತ್ತದೆ" ಎಂದು ಅಭಿಪ್ರಾಯಪಟ್ಟರು. ಜ್ಞಾನವಿಕಾಸ ಸಮನ್ವಯ ಅಧಿಕಾರಿ ಮಂಜುಳಾ, ವಲಯ ಮೇಲ್ವಿಚಾರಕ ಹನುಮಂತ, ಪ್ರಮುಖರಾದ ಶಿವಗಂಗಮ್ಮ, ಸುಜಾತ, ಹೊಲಿಗೆ ತರಬೇತಿ ಶಿಕ್ಷಕಿ, ಕೇಂದ್ರದ ಅಧ್ಯಕ್ಷೆ ಜ್ಯೋತಿ ಹಾಗೂ ಸ್ಥಳೀಯ ಸೇವಾ ಪ್ರತಿನಿಧಿಗಳು ಮತ್ತು ಸಂಘದ ಸದಸ್ಯರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಕುಡಿಯುವ ನೀರು ಭರ್ತಿ ಮತ್ತು ಡಿಸೆಂಬರ್ ಅಂತ್ಯದೊಳಗೆ ಇ-ಸ್ವತ್ತು ಸಂಪೂರ್ಣಗೊಳಿಸಿ: ಹಾಲಸಿದ್ದಪ್ಪ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಭೂ-ಗ್ಯಾರಂಟಿ ಯೋಜನೆ ಅಡಿಯಲ್ಲಿ ಪಂಚಾಯತ ರಾಜ್ಯ ಇಲಾಖೆ ನಿರ್ದೇಶನ ಮೇರೆಗೆ ಡಿಸೆಂಬರ್ ತಿಂಗಳ ಅಂತ್ಯದೊಳಗೆ ತಾಲೂಕಿನ ಎಲ್ಲಾ ಪಿಡಿಒಗಳು ಇ-ಸ್ವತ್ತು ಕೊಡುವ ಕೆಲಸವನ್ನು ಪೂರ್ಣಗೊಳಿಸಿ ಎಂದು ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿಗಳಾದ ಹಾಲಸಿದ್ದಪ್ಪ ಸೂಚನೆ ನೀಡಿದರು.

ನಗರದ ತಾಲೂಕು ಪಂಚಾಯತಿ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕಿನ ಅಧಿಕಾರಿಗಳ ಜೊತೆ ಸಭೆ ನಡೆಸಿ, ಮೊದಲು ಜನರಿಗೆ ಇದರ ಬಗ್ಗೆ ಪ್ರಚಾರ ಮಾಡಿ ನಂತರ ನೋಟಿಸ್ ನೀಡಿ, 7 ದಿನದೊಳಗಾಗಿ ಆಕ್ಷೇಪಣೆ ಸಲ್ಲಿಕೆಗೆ ಕಾಲಾವಕಾಶ ನೀಡಿ, ನಂತರ ವಿದ್ಯುತ್ ಬಿಲ್ ಸೇರಿದಂತೆ ಇನ್ನಿತರೆ ದಾಖಲಾತಿಗಳ ಅನ್ವಯ ನೈಜ ಮಾಲೀಕರಿಗೆ ಇ-ಸ್ವತ್ತು ಕೊಡಿ



ಎಂದು ತಿಳಿಸಿ, ನಂತರ ಗ್ರಾಮ ಪಂಚಾಯತಿ ಪಿಡಿಒಗಳಿಂದ ಪಂಚಾಯತಿಯ ವ್ಯಾಪ್ತಿಯಲ್ಲಿರುವ ಒಟ್ಟು ಆಸ್ತಿಗಳು ಇ-ಸ್ವತ್ತು ಕೊಟ್ಟ ಆಸ್ತಿಗಳು ಮತ್ತು ಬಾಕಿ ಇರುವ ಆಸ್ತಿಗಳ ಬಗ್ಗೆ ಮಾಹಿತಿ ಪಡೆದರು.

ನಂತರ ಕುಡಿಯುವ ನೀರಿನ ವಿಚಾರದ ಬಗ್ಗೆ ಚರ್ಚೆ ನಡೆಸಿ, ಮುಂದಿನ ಜನವರಿ ವರೆಗೂ

> ಈ ಸಭೆಯಲ್ಲಿ ಪಿಡಿಒಗಳು ಮತ್ತು ವಿವಿಧ ಇಲಾಖೆಯ ಕೆಲವು ಅಧಿಕಾರಿಗಳು ಗೈರಾಗಿದ್ದು ಕಂಡು ಬಂತು. ಕಾಟಾಚಾರಕ್ಕೆ ನಡೆಸಿದ ಸಭೆ, ಪಿಡಿಒಗಳ ಹತ್ತಿರ ಸಂಪೂರ್ಣ ಮಾಹಿತಿ ಕೊರತೆ ಎದ್ದು ಕಂಡಿತು. ಸಾಕಷ್ಟು ಇ-ಸ್ವತ್ತು ಮತ್ತು ಮನೆ ಟ್ಯಾಕ್ಸ್ ಬಿಲ್ ಗಳ ಬಾಕಿ ಉಳಿಸಿ ಕೊಂಡ ಪಿಡಿಒಗಳ ವಿರುದ್ಧ ಗರಂ ಆದ ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಹಾಲಸಿದ್ದಪ್ಪ.

ನೀರಿನ ಅಭಾವ ತಲೆದೂರದಂತೆ ತಾಲೂಕಿನ ಎಲ್ಲಾ ಪಿಡಿಒಗಳು ಕೂಡ ಕುಡಿಯುವ ನೀರಿನ ಕೆರೆಗಳನ್ನು ಭರ್ತಿ ಮಾಡಿಕೊಳ್ಳಿ, ನೀರಿನ ಬಗ್ಗೆ ಯಾವುದೇ ಗ್ರಾಮಗಳಲ್ಲಿ ದೂರು ಬಂದರೆ ಅದಕ್ಕೆ ನೀವೆ ಹೊಣೆಗಾರರು ಎಂದು ಎಚ್ಚರಿಸಿದರು.

ಈ ಸಭೆಯಲ್ಲಿ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ, ತಾಲೂಕು ಪಂಚಾಯತಿ ಎಡಿ ಯಂಕಪ್ಪ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಕಾಲುವೆಗೆ ನೀರು ಹರಿಸುವಲ್ಲಿ ರಾಜಕೀಯ ಮಾಡುತ್ತಿರುವ ಅಧಿಕಾರಿಗಳು,ಒಬ್ಬರಿಗೆ ಸುಣ್ಣ, ಒಬ್ಬರಿಗೆ ಬೆಣ್ಣೆ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕ ತೋರಣದಿನ್ನಿ ಹತ್ತಿರ ತುಂಗಭದ್ರಾ ಎಡದಂಡೆ 69 ನೇ ವಿತರಣೆ ಕಾಲುವೆಯ ನೀರು ಸರಬರಾಜು ಮಾಡುವಲ್ಲಿ ನೀರಾವರಿ ಅಧಿಕಾರಿಗಳು ಬಹಳಷ್ಟು ಎಡವಟ್ಟು ಮಾಡುತ್ತಿದ್ದು ಅದಕ್ಕೆ ಭಾಗದ ರೈತರು ಆಕ್ರೋಶ ಭರಿತರಾಗಿದ್ದು, ರೈತರಿಗೆ ಕೊಡುವ ನೀರಿನ ಗೇಜ್ ಸರಿಯಾಗಿ ಪಾಲಿಸುತ್ತಿಲ್ಲ,

ಅದರಲ್ಲಿ ಕೂಡ ಮೋಸದಾಟ ಹೀಗಾದರೆ ರೈತರ ಗೋಳು ಶಿವನೇ ಬಲ್ಲ,



ಈಗಾಗಲೇ ಒಂದು ಎಕರೆಗೆ 50 ರಿಂದ 60 ಸಾವಿರ ರೂಪಾಯಿ ಖರ್ಚು ಮಾಡಲಾಗಿದೆ, ಇಂಥ ಕಷ್ಟದ ಸಂದರ್ಭದಲ್ಲಿ ಭತ್ತಕ್ಕೆ ಸರಿಯಾಗಿ ನೀರು ಬರೆದಿದ್ದರೆ ರೈತರು ಬಹಳಷ್ಟು ನಷ್ಟ ಉಂಟಾಗುತ್ತದೆ ಅದಕ್ಕೆ ನೀರಿನ ಅವಶ್ಯಕತೆ ತುಂಬಾ ಇದೆ, ಇದರಲ್ಲಿ ನೀರಾವರಿ ಸಹಾಯಕ ಕಾರ್ಯಪಾಲಕ ಅಭಿಯಂತರ ರೈತರ ವಿಚಾರದಲ್ಲಿ ತಾರತಮ್ಯ ಮಾಡುತ್ತಾರೆ ಜೊತೆಗೆ ನೀರಿನ ವಿಚಾರದಲ್ಲಿ ಜಿಲ್ಲೆಯ ಪ್ರಭಾವಿ ರಾಜ-ಕೀಯ ನಾಯಕರ ಒತ್ತಡಕ್ಕೆ ಮಣಿದ ನೀರಾವರಿ ಅಧಿಕಾರಿಗಳು ಕರ್ತವ್ಯ ಲೋಪ ಮಾಡುತ್ತಿದ್ದು, ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಎಂಬಂತಿದೆ ಅಧಿಕಾರಿಗಳ ನಡೆ, ಹೀಗೆ ಆದರೆ ಅತಿ ಶೀಘ್ರದಲ್ಲಿ ರೈತರ ಶಕ್ತಿ ಸಾಮಥ-ರ್ಯ ಏನು ಎಂಬುದನ್ನು ಅಧಿಕಾರಿಗಳಿಗೆ, ಸರಕಾರಕ್ಕೆ ಶಕ್ತಿಪ್ರದರ್ಶನ ವೇದಿಕೆ ಸಿದ್ಧವಾಗುತ್ತಿದೆ ಎಂದು ನೂರಾರು ಮನನಂದ ರೈತರು ಎಚ್ಚರಿಸಿದ್ದಾರೆ.ರೈತರಾದ ಶರಣೀಗೌಡ ಮಾತನಾಡಿ ಆತ್ಮೀಯ ರೈತ ಬಾಂಧವರೇ ನಿಮ್ಮ ಮೇಲಿನ ಮೋಸದಾಟಕ್ಕೆ ಎಷ್ಟು ಅಂತ ಬಲಿ ಆಗ್ತೀರಾ, ಅದಕ್ಕೆ ನಾವೇ ಎಚ್ಚೆತ್ತು , ಬೃಹತ್ ಹೋರಾಟ ವೇದಿಕೆ ಸಜ್ಜುಗೊಳ್ಳಿಸೋಣ. ಇದು ನಮ್ಮ ಮನವಿ ಮತ್ತು ಕಳಕಳಿ, ಈಗಾಗಲೇ ಹೋರಾಟಕ್ಕೆ ವೇದಿಕೆ ಸಿದ್ಧವಾಗುತ್ತದೆ ಎಲ್ಲವೂ ಹೊರಾಟ ನಮಗಾಗಿ ದಯವಿಟ್ಟು ಸಹಕರಿಸಿ ರೈತರ ಗತ್ತು ತಾಕತ್ತು ತೊರಿಸೋಣ ಎಂದು ಹೇಳಿದರು.

ಆತ್ಕೂರು ಗ್ರಾಮದಲ್ಲಿ SC/ST ಸಮನ್ವಯ ಸಭೆ: ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸಿದ ಅಧಿಕಾರಿಗಳು, ಅಹವಾಲು ಸ್ವೀಕಾರ

❑ ನೈಜ್ಯ ದೆಸೆ ನ್ಯೂಸ್

ಯಾಪಲದಿನ್ನಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (SC/ST) ಸಮುದಾಯದ ಜನರ ಹಕ್ಕುಗಳ ರಕ್ಷಣೆ, ದೌರ್ಜನ್ಯ ಪ್ರಕರಣಗಳ ನಿಯಂತ್ರಣ ಹಾಗೂ ಸಾರ್ವಜನಿಕರ ಕುಂದುಕೊರತೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಯಾಪಲದಿನ್ನಿ ಪೊಲೀಸ್ ಠಾಣೆ ವ್ಯಾಪ್ತಿಯ ಆತ್ಕೂರು ಗ್ರಾಮದಲ್ಲಿ ಇಂದು ತಾಲೂಕು ಮಟ್ಟದ SC/ST ಸಮನ್ವಯ ಸಭೆ ನಡೆಸಲಾಯಿತು.

ದೌರ್ಜನ್ಯ ಪ್ರಕರಣಗಳ ತಾಲೂಕು ನಿಯಂತ್ರಣ ಸಮಿತಿಯ ವತಿಯಿಂದ ಆಯೋಜಿಸಲಾದ ಈ ಸಭೆಯಲ್ಲಿ ಖಅ/ಖಖಿ ಸಮುದಾಯದ ಮುಖಂಡರು, ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಭೆಯಲ್ಲಿ ಸಮುದಾಯದ ಮುಖಂಡರು ತಮ್ಮ ಗ್ರಾಮಗಳಲ್ಲಿ ಎದುರಿಸುತ್ತಿರುವ ವಿವಿಧ ಸಮಸ್ಯೆಗಳು, ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದ ಅಹವಾಲುಗಳು, ಸರ್ಕಾರಿ ಸೌಲಭ್ಯಗಳ ವಿತರಣೆ, ಮೂಲಭೂತ ಸೌಕರ್ಯಗಳ ಕೊರತೆ ಸೇರಿದಂತೆ ಹಲವು ಪ್ರಮುಖ ವಿಚಾರಗಳನ್ನು



ಅಧಿಕಾರಿಗಳ ಗಮನಕ್ಕೆ ತಂದರು.

ಜನರ ಸಮಸ್ಯೆ ಆಲಿಸಿದ ಅಧಿಕಾರಿಗಳು ಸಭೆಯಲ್ಲಿ ಸಾರ್ವಜನಿಕರಿಗೆ ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಮುಂದೆ ಪ್ರಸ್ತಾಪಿಸಲು ಅವಕಾಶ ನೀಡಲಾಯಿತು. ಮುಖಂಡರು ಸಲ್ಲಿಸಿದ ಅಹವಾಲುಗಳನ್ನು ಸ್ವೀಕರಿಸಿದ ಅಧಿಕಾರಿಗಳು, ಸಮಸ್ಯೆಗಳ ಸ್ವರೂಪ ಮತ್ತು ಅವುಗಳಿಗೆ ಸಂಬಂಧಿಸಿದ ಇಲಾಖೆಗಳ ಕುರಿತು ಮಾಹಿತಿ ಪಡೆದುಕೊಂಡರು.

SC/ST ಸಮುದಾಯದ ಜನ-ರಿಗೆ ಯಾವುದೇ ರೀತಿಯ ಅನ್ಯಾಯ ಅಥವಾ ದೌರ್ಜನ್ಯ ಸಂಭವಿಸಿದಲ್ಲಿ ಕಾನೂನುಬದ್ಧವಾಗಿ ದೂರು ಸಲ್ಲಿಸಿ ನ್ಯಾಯ ಪಡೆಯುವ ಕು-ರಿತು ಅರಿವು ಮೂಡಿಸುವುದು, ಸಂತ್ರಸ್ತ-ರಿಗೆ ಸರ್ಕಾರದ ನಿಯಮಾನುಸಾರ ನೆರವು ದೊರಕುವಂತೆ ನೋಡಿಕೊಳ್ಳುವುದು ಹಾಗೂ ಇಂತಹ ಪ್ರಕರಣಗಳ ನಿಯಂತ್ರಣ-ಕ್ಕೆ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವ ಕುರಿತು ಸಭೆಯಲ್ಲಿ ಗಮನಹರಿಸಲಾಯಿತು. ಅಧಿಕಾರಿಗಳು ಮತ್ತು ಸಮುದಾಯದ ಮುಖಂಡರ ನಡುವೆ ಸಂವಾದ

ಗ್ರಾಮೀಣ ಭಾಗದ ಜನರು ತಮ್ಮ ಸಮಸ್ಯೆಗಳಿಗಾಗಿ ವಿವಿಧ ಸರ್ಕಾರಿ ಕಚೇ-ರಿಗಳಿಗೆ ಅಲೆದಾಡುವ ಪರಿಸ್ಥಿತಿ ತಪ್ಪಿಸುವ ನಿಟ್ಟಿನಲ್ಲಿ ಇಂತಹ ಸಭೆಗಳು ಮಹತ್ವದ್ದಾಗಿವೆ. ಜನಪ್ರತಿನಿಧಿಗಳು, ಸಮುದಾಯದ ಮುಖಂಡರು ಹಾಗೂ ಅಧಿಕಾರಿಗಳ ನಡುವೆ ನೇರ ಸಂವಾದ ಏರ್ಪಡುವುದರಿಂದ ಸಮಸ್ಯೆಗಳನ್ನು ಗುರುತಿಸಿ ಪರಿಹಾರದತ್ತ ಸಾಗಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಜಾತಿ ತಾರತಮ್ಯ, ಅಸ್ಪೃಶ್ಯತೆ ಹಾಗೂ ದೌರ್ಜನ್ಯಗಳಿಗೆ ಅವಕಾಶವಿಲ್ಲದ ವಾತಾವರಣ ನಿರ್ಮಾಣವಾಗಬೇಕು. ಪ್ರತಿಯೊಬ್ಬ ನಾಗರಿಕನಿಗೂ ಸಂವಿಧಾನ ನೀಡಿರುವ ಸಮಾನತೆ ಮತ್ತು ಗೌರವದ ಹಕ್ಕುಗಳು ದೊರೆಯಬೇಕು ಎಂಬ ಆಶಯದೊಂದಿಗೆ ಸಭೆಯಲ್ಲಿ ಕುಂದುಕೊರತೆಗಳನ್ನು ಆಲಿಸಿ ಅಹವಾಲುಗಳನ್ನು ಸ್ವೀಕರಿಸಲಾಯಿತು.

ಸಭೆಯಲ್ಲಿ ರಾಯಚೂರು ಎಸ್ಪಿ, ಯಾಪಲದಿನ್ನಿ ಪೊಲೀಸ್ ಠಾಣೆಯ ಅಧಿಕಾ-ರಿಗಳು, ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಖಅ/ಖಖಿ ಸಮುದಾಯದ ಮುಖಂಡರು ಹಾಗೂ ಆತ್ಕೂರು ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಕಾನೂನಿನ ರಕ್ಷಣೆ ಪ್ರತಿಯೊಬ್ಬರಿಗೂ ತಲುಪಲಿ ಎಂಬ ಆಶಯದೊಂದಿಗೆ ಸಮನ್ವಯ ಸಭೆ ನಡೆಯಿತು.

ಕಂಪ್ಲಿ ತಾಲೂಕು 2ನೇ ಕನ್ನಡ ಸಾಹಿತ್ಯ ಸಮ್ಮೇಳನ: ನವೆಂಬರ್ 13ಕ್ಕೆ ದಿನಾಂಕ ನಿಗದಿ, ಅಧ್ಯಕ್ಷರಾಗಿ ಬರಹಗಾರ ಬಂಗಿ ದೊಡ್ಡ ಮಂಜುನಾಥ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಸ್ಥಳೀಯ ಪಟ್ಟಣದಲ್ಲಿ ಆಯೋಜಿಸಲು ಉದ್ದೇಶಿಸಲಾಗಿರುವ ತಾಲೂಕು ಮಟ್ಟದ 2ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂಬರುವ ನವೆಂಬರ್ 13ರಂದು ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಕಂಪ್ಲಿಯ ಬರಹಗಾರ, ಪತ್ರಿಕಾ ವರದಿಗಾರ ಬಂಗಿ ದೊಡ್ಡ ಮಂಜುನಾಥ ಅವರನ್ನು ಗೌರವಪೂರ್ವಕವಾಗಿ ಆಯ್ಕೆ ಮಾಡಿ ಅವರಿಗೆ ಪ್ರೀತಿಪೂರ್ವಕ ಸನ್ಮಾನಿಸಿ ಆಹ್ವಾನ ನೀಡಲಾಯಿತು.

ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ತಾಲೂಕು ಕಾರ್ಯಕಾರಿ ಸಮಿತಿಯ ಮಹತ್ವದ ಸಭೆಯಲ್ಲಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಕಸಾಪ ತಾಲೂಕು ಅಧ್ಯಕ್ಷರಾದ ಎಸ್.ಜಿ. ಚಿತ್ರಗಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ತಾಲೂಕಿನ ದ್ವಿತೀಯ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಹಲವು ಗಣ್ಯರ ಹೆಸರುಗಳು ಪ್ರಸ್ತಾಪವಾದವಾದರೂ, ಅಂತಿಮವಾಗಿ ಸಾಹಿತ್ಯಿಕ ಕೊಡುಗೆಗಳನ್ನು ಪರಿಗಣಿಸಿ ಬಂಗಿ ದೊಡ್ಡ ಮಂಜುನಾಥ ಅವರ ಹೆಸರನ್ನು ಅಂತಿಮಗೊಳಿಸಲಾಯಿತು. ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಈ ಬಾರಿಯ ಸಮ್ಮೇಳನವನ್ನು ವಿಜೃಂಭಣೆಯಿಂದ ಆಚ-ರಿಸಲು ಸಭೆಯಲ್ಲಿ ನಿರ್ಧರಿಸಲಾಗಿದ್ದು, ನವೆಂಬರ್ 13 ರಂದು ಪಟ್ಟಣವು ಸಾಹಿತ್ಯ ಜಾತ್ರೆಗೆ ಸಾಕ್ಷಿಯಾಗಲಿದೆ.



ಈ ಪ್ರಮುಖ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಸಾಪ ಪದಾಧಿಕಾರಿಗಳು ಹಾಗೂ ಗಣ್ಯರಾದ ಜಿ. ಪ್ರಕಾಶ್, ಕೆ.ಎಂ. ಹೇಮಯ್ಯಸ್ವಾಮಿ, ಎ.ಸಿ. ದಾನಪ್ಪ, ಕೃಷ್ಣ ಎಸ್. ಪೋಳ್, ಡಾ. ಸುನಿಲ್, ಶ್ಯಾಮ್ ಸುಂದರ್, ಅಂಬಿಗರ ಮಂಜುನಾಥ, ಎಸ್.ಡಿ. ಬಸವರಾಜ, ಯು.ಎಂ. ವಿದ್ಯಾಶಂಕರ, ಬಿ. ರುದ್ರಯ್ಯ ಸ್ವಾಮಿ, ಎಲಿಗಾರ ವೆಂಕಟರೆಡ್ಡಿ ಸೇರಿದಂತೆ ಸಾಹಿತ್ಯಾಸಕ್ತರು ಹಾಗೂ ತಾಲೂಕಿನ ಪ್ರಮುಖರು ಉಪಸ್ಥಿತರಿದ್ದು, ಸಮ್ಮೇಳನದ ಯಶಸ್ಸಿಗೆ ಶ್ರಮಿಸುವ ಸಂಕಲ್ಪ ಮಾಡಿದರು.

ಅಂಬೇಡ್ಕರ್ ಅವರ ಜೀವನ ವಿದ್ಯಾರ್ಥಿಗಳಿಗೆ ಮಾದರಿ: ಅಬ್ರಾಹಂ ಹೊನ್ನಟಗಿ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: 64 ವಿಷಯಗಳಲ್ಲಿ ಅಪಾರ ಜ್ಞಾನ ಸಂಪಾದಿಸಿ ಮಹಾನ್ ವಿದ್ವಾಂಸರೆನಿಸಿಕೊಂಡ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಹೋರಾಟದ ಹಾದಿಯನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಓದಿ, ಅರ್ಥೈಸಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಿಕ್ಷಣ ಸಾರ್ಥಕವಾಗುತ್ತದೆ ಎಂದು ಎಂ.ಆರ್.ಹೆಚ್.ಎಸ್. ಜಿಲ್ಲಾಧ್ಯಕ್ಷ ಅಬ್ರಾಹಂ ಹೊನ್ನಟಗಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಯಚೂರು ವತಿಯಿಂದ ಆಯೋಜಿಸಿದ್ದ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬದುಕು ಮತ್ತು ಹೋರಾಟದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ



ಅಂಬೇಡ್ಕರ್ ಅವರು ಅಧ್ಯಯನ ಮಾಡದ ವಿಷಯವೇ ಇಲ್ಲ ಎನ್ನಬಹುದು. ಅವರಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ನಿರಂತರ ಪರಿಶ್ರಮ, ಶ್ರದ್ಧೆ ಮತ್ತು ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡಿದಾಗ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ಸಂವಿಧಾನ ರಚನೆಯ ಸಂದರ್ಭದಲ್ಲಿ ಅನೇಕ ಅವಮಾನ ಹಾಗೂ ಸವಾಲುಗಳನ್ನು ಎದುರಿಸಿದರೂ ಎದೆಗುಂದದೆ, ವಿವಿಧ ದೇಶಗಳ ಸಂವಿಧಾನಗಳನ್ನು ಆಳವಾಗಿ ಅಧ್ಯಯನ ಮಾಡಿ ಭಾರತೀಯ ಸಂವಿಧಾನ ರಚನೆಯಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಪ್ರತಿಯೊಬ್ಬ ಭಾರತೀಯನಿಗೂ ಸಮಾನತೆಯ ಹಕ್ಕು ದೊರೆಯುವಂತೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರವಲ್ಲದೆ, ಇತರ ಹಿಂದುಳಿದ ವರ್ಗಗಳಿಗೂ ಮೀಸಲಾತಿ ಸೇರಿದಂತೆ ಸಾಮಾಜಿ-ಕ ನ್ಯಾಯದ ಆಶಯಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಮಹಿಳೆಯರಿಗೂ ಸಮಾನ ಹಕ್ಕು ಮತ್ತು ಮತದಾನದ ಹಕ್ಕು ದೊರೆಯುವಲ್ಲಿ ಅಂಬೇಡ್ಕರ್ ಅವರ ಕೊಡುಗೆಯನ್ನು ಸ್ಮ-ರಿಸಬೇಕು. ಆರ್ಥಿಕ ತಜ್ಞರಾಗಿದ್ದ ಅವರು ಕಾರ್ಮಿಕರ ಹಕ್ಕುಗಳು, ಎಂಟು ಗಂಟೆಗಳ ಕೆಲಸದ ಅವಧಿ ಸೇರಿದಂತೆ ಹಲವು ಮಹತ್ವದ ಸುಧಾರಣೆಗಳಿಗೆ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಹನುಮಂತ ಚನ್ನೂರು ಮಾತನಾಡಿ, ಜಾತಿ, ಮತ, ಪಂಥಗಳ ಭೇದಭಾವ ಮಾಡದೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮಾನತೆಯ ಮನೋಭಾವ ಬೆಳೆಸಿಕೊಳ್ಳಬೇಕು. ಉತ್ತಮ ಶಿಕ್ಷಣ ಪಡೆದು ಅಂಬೇಡ್ಕರ್ ಅವರಂತೆ ಸಾಧಕರಾಗಿ ಸಮಾಜಕ್ಕೆ ಕೊಡುಗೆ ನೀಡಬೇಕು. ಸರ್ಕಾರದ ವಿವಿಧ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅದೃಷ್ಟವಂತರು ಎಂದರು.

ಕಾರ್ಯಕ್ರಮದಲ್ಲಿ ರಸಪ್ರಶ್ನೆ, ಪ್ರಬಂಧ ಹಾಗೂ ಆಶುಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು. ಕಾರ್ಯಕ್ರಮವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚನ್ನಪ್ಪ ಚನ್ನೂರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪಟ್ಟಣ ಪಂಚಾಯಿತಿ ಸದಸ್ಯ ಅಜಿತ್ ಕುಮಾರ್ ಹೊನ್ನಟಗಿ, ಸೂರಿ ದುರುಗಣ್ಣ ನಾಯಕ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಹನುಮೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇಸ್ಮಾಯಿಲ್, ಚನ್ನಬಸವ ಹಾಗೂ ಉಪನ್ಯಾಸಕ ಜಯಪ್ಪ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಯಾಸೀನ್ ಅವರು ನಡೆಸಿಕೊಟ್ಟರು

ನೇಮಕಾತಿ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026 – 45 ಪೌರಕಾರ್ಮಿಕ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ.

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026: 45 ಪೌರಕಾರ್ಮಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಶಿವಮೊಗ್ಗ ಮಹಾನಗರ ಪಾಲಿಕೆಯು ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಶಿವಮೊಗ್ಗ ಮಹಾನಗರ ಪಾಲಿಕೆ ಹುದ್ದೆಗಳ ಸಂಖ್ಯೆ: 45 ಉದ್ಯೋಗ ಸ್ಥಳ: ಶಿವಮೊಗ್ಗ ? ಕರ್ನಾಟಕ ಹುದ್ದೆಯ ಹೆಸರು: ಪೌರಕಾರ್ಮಿಕ ವೇತನ: ತಿಂಗಳಿಗೆ ರೂ. 27,000 ? 46,675/– ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ನವೆಂಬರ್–2026. ಅಧಿಕೃತ ವೆಬ್‌ಸೈಟ್: shivamoggacitycorp.org.

ದೀಪಾವಳಿ ಉಡುಗೊರೆಯಾಗಿ ಉದ್ಯೋಗಿಗಳಿಗೆ ಐಫೋನ್ 16 ನೀಡಿದ ದೆಹಲಿ ಕಂಪನಿ : ವಿಡಿಯೋ ವೈರಲ್

ನೈಜ್ಯ ದೆಸೆ ನ್ಯೂಸ್

ನವದೆಹಲಿ: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ದೆಹಲಿ ಮೂಲದ ಕಂಪನಿಯೊಂದು ತನ್ನ ಉದ್ಯೋಗಿಗಳಿಗೆ ಐಫೋನ್ 16 ಸ್ಮಾರ್ಟ್‌ಫೋನ್‌ಗಳನ್ನು ಉಡುಗೊರೆಯಾಗಿ ನೀಡುವ ಮೂಲಕ ಗಮನ ಸೆಳೆದಿದೆ. ಕಂಪನಿಯ ಈ ವಿಶೇಷ ಉಡುಗೊರೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ನೆಟ್ಟಿಗರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ನವದೆಹಲಿಯ ರೋಹಿಣಿ ಪ್ರದೇಶದಲ್ಲಿರುವ



ಕಂಪನಿಯು ತನ್ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಡಿಯೋವನ್ನು ಹಂಚಿಕೊಂಡಿದೆ. ಕೇವಲ 15 ಸೆಕೆಂಡ್‌ಗಳ ಈ ವಿಡಿಯೋದಲ್ಲಿ ಉದ್ಯೋಗಿಗಳ ಮೇಜುಗಳ ಮೇಲೆ ವಿವಿಧ ಬಣ್ಣಗಳ ಐಫೋನ್ 16 ಮೊಬೈಲ್‌ಗಳನ್ನು ರಿಬ್ಬನ್‌ಗಳಿಂದ ಅಲಂಕರಿಸಿ ಇಡಲಾಗಿದೆ. ಸಾಮಾನ್ಯವಾಗಿ ದೀಪಾವಳಿ ಸಂದರ್ಭದಲ್ಲಿ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಸಿಹಿತಿಂಡಿ, ಉಡುಗೊರೆಗಳ ಹ್ಯಾಂಪರ್ ಅಥವಾ ದಿನಬಳಕೆಯ ವಸ್ತುಗಳನ್ನು ನೀಡುವುದು ವಾಡಿಕೆ. ಆದರೆ ಈ ಕಂಪನಿಯು ದುಬಾರಿ ಸ್ಮಾರ್ಟ್‌ಫೋನ್‌ಗಳನ್ನು ಉಡುಗೊರೆಯಾಗಿ ನೀಡಿರುವುದು ಎಲ್ಲರ ಗಮನ ಸೆಳೆದಿದೆ. ವಿಡಿಯೋ ಹಂಚಿಕೊಂಡಿರುವ ಕಂಪನಿಯು, 'ಯಾವುದೇ ಸ್ಪರ್ಧೆಯಿಲ್ಲ, ನಿಮಗೆ ಏನು ಸಿಕ್ಕಿತು' ಎಂಬ ಅರ್ಥದ ಶೀರ್ಷಿಕೆ ನೀಡಿದೆ. ಈ ಪೋಸ್ಟ್ ಕೆಲವೇ ಸಮಯದಲ್ಲಿ ವೈರಲ್ ಆಗಿದ್ದು, ಕಂಪನಿಯ ಔದಾರ್ಯಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ವಿಡಿಯೋ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಆರಂಭದಲ್ಲಿ ಕೆಲವರು ಇದು ನೈಜ ವಿಡಿಯೋವೇ ಅಥವಾ ಕೃತಕ ಬುದ್ಧಿಮತ್ತೆ (ಎಐ) ಮೂಲಕ ಸೃಷ್ಟಿಸಿದ್ದೇ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಂಪನಿ, ವಿಡಿಯೋವನ್ನು ಮತ್ತೊಮ್ಮೆ ವೀಕ್ಷಿಸುವಂತೆ ಹೇಳಿ, ಇದು ಎಐ ಮೂಲಕ ಸೃಷ್ಟಿಸಿದ್ದಲ್ಲ ಎಂದು ಸ್ಪಷ್ಟಪಡಿಸಿದೆ. ಇನ್ನು ಕೆಲವರು ಕಂಪನಿಯಲ್ಲಿ ಉದ್ಯೋಗಾವಕಾಶಗಳಿವೆಯೇ ಎಂದು ಪ್ರಶ್ನಿಸಿ, ತಮಗೂ ಅಲ್ಲಿ ಕೆಲಸ ಮಾಡಲು ಆಸೆಯಿದೆ ಎಂದು ತಮಾಷೆ ಮಾಡಿದ್ದಾರೆ. ಮತ್ತೊಬ್ಬರು ದೀಪಾವಳಿ ಸಂದರ್ಭದಲ್ಲಿ ಇಂತಹ ಉಡುಗೊರೆಗಳ ವಿಡಿಯೋಗಳನ್ನು ನೋಡಿದರೆ ಅಸೂಯೆಯಾಗುತ್ತದೆ. ಹೀಗಾಗಿ ಹಬ್ಬದ ಸಮಯದಲ್ಲಿ ಇನ್‌ಸ್ಟಾಗ್ರಾಂ ಬಳಸದಿರುವುದೇ ಉತ್ತಮ ಎಂದು ಹಾಸ್ಯ ಚಟಾಕಿ ಹಾರಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಕೊಪ್ಪರ ಗ್ರಾಮದಲ್ಲಿ SC/ST ಸಮುದಾಯದ ಕುಂದುಕೊರತೆ ಸಭೆ: ಮುಖಂಡರಿಂದ ಅಹವಾಲು ಸ್ವೀಕರಿಸಿದ ಪೊಲೀಸ್ ಅಧಿಕಾರಿಗಳು

ನೈಜ್ಯ ದೆಸೆ ನ್ಯೂಸ್



ದೇವದುರ್ಗ: ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (SC/ST) ಸಮುದಾಯದ ಜನರ ಕುಂದುಕೊರತೆಗಳನ್ನು ಆಲಿಸುವ ಉದ್ದೇಶದಿಂದ ದೇವದುರ್ಗ ಪೊಲೀಸ್ ಠಾಣೆ ವ್ಯಾಪ್ತಿಯ ಕೊಪ್ಪರ ಗ್ರಾಮದಲ್ಲಿ SC/ST ಸಮುದಾಯದ ಸಭೆ ಆಯೋಜಿಸಲಾಗಿತ್ತು.

ದೇವದುರ್ಗ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ (PI) ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಖಅ/ಖಖ ಸಮುದಾಯದ ಮುಖಂಡರು ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸಮುದಾಯದ ಮುಖಂಡರು ತಮ್ಮ ಗ್ರಾಮಗಳಲ್ಲಿನ ವಿವಿಧ ಸಮಸ್ಯೆಗಳು, ಸಾರ್ವಜನಿಕರಿಗೆ ಎದುರಾಗುತ್ತಿರುವ ತೊಂದರೆಗಳು ಹಾಗೂ ವಿವಿಧ ಬೇಡಿಕೆಗಳನ್ನು ಅಧಿಕಾರಿಗಳ ಮುಂದಿಟ್ಟರು. ಮುಖಂಡರು ಸಲ್ಲಿಸಿದ ಅಹವಾಲುಗಳನ್ನು ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸ್ವೀಕರಿಸಿ, ಸಮಸ್ಯೆಗಳ ಕು–ರಿತು ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಸಮುದಾಯದ ಜನರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಪೊಲೀಸ್ ಇಲಾಖೆ ಮತ್ತು ಇತರ ಸರ್ಕಾರಿ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸುವ ಕುರಿತು ಚರ್ಚಿಸಲಾಯಿತು.

SC/ST ಸಮುದಾಯದ ಜನರ ಹಕ್ಕುಗಳ ರಕ್ಷಣೆ, ಕಾನೂನು ಅರಿವು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದನೆ ಹಾಗೂ ಪೊಲೀಸ್ ಇಲಾಖೆ ಮತ್ತು ಜನರ ನಡುವಿನ ಉತ್ತಮ ಬಾಂಧವ್ಯ ವೃದ್ಧಿಸುವ ನಿಟ್ಟಿನಲ್ಲಿ ಇಂತಹ ಸಭೆಗಳು ಮಹತ್ವ ಪಡೆದಿವೆ.

ಸಭೆಯಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿ, ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಖಅ/ಖಖ ಸಮುದಾಯದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನಶಾ ಮುಕ್ತ ರಾಯಚೂರ ಹಾಗೂ ತಂಬಾಕು ಮುಕ್ತ ಯುವ ಅಭಿಯಾನ 4.0 ಅಡಿ ಜಾಗೃತಿ ನಡಿಗೆ:

ನೈಜ್ಯ ದೆಸೆ ನ್ಯೂಸ್



ಒಮ್ಮೆ ಚಟವಾಗಿ ರೂಡಿಯಾಗುವ ನಶಾ ಪದಾರ್ಥಗಳಾದ, ಗಾಂಜಾ, ಅಫೀಮು, ಚರಸ್, ಹೆರಾಯೀನ್, ಹಾಗೂ ಮದ್ಯಪಾನ, ಹಾಗೂ ತಂಬಾಕು ಹಾಗೂ ಅದರ ಉತ್ಪನ್ನಗಳು ವ್ಯಕ್ತಿಯ ವ್ಯಕ್ತಿತ್ವವನ್ನು ನಾಶ ಮಾಡುವ ಜೋತೆಗೆ ಕುಟುಂಬದ ಗೌರವವನ್ನು ಸಹ ಕುಂದಿಸುತ್ತವೆ. ಇದನ್ನು ತಡೆಯಲು ಆರಂಭದಲ್ಲಿಯೇ ನಾವೆಲ್ಲರೂ ಜಾಗೃತಿ ನೀಡೋಣವೆಂದು ಜಿಲ್ಲಾಧಿಕಾರಿ ಪೂವಿತಾ ಎಸ್ ರವರು ಕರೆ ನೀಡಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಪೋಲಿಸ್ ಇಲಾಖೆ, ರಿಮ್ಸ್ ಭೋಧಕ ಆಸ್ಪತ್ರೆ, ನವೋದಯ ವೈದ್ಯಕೀಯ ಮಹಾ ವಿದ್ಯಾಲಯ, ಎ.ಎಮ್.ಇ ಡೆಂಟಲ್ ಕಾಲೇಜ್, ನಂದಿನಿ ನರ್ಸಿಂಗ್ ಕಾಲೇಜ್, ಸರಕಾರಿ ಮಹಿಳಾ ಕಾಲೇಜಿನ ಎನ್–ಎಸ್‌ಎಸ್ ಘಟಕ, ಸಂಘ ಸಂಸ್ಥೆಗಳೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರು ಹಮ್ಮಿಕೊಂಡ ನಶಾ ಮುಕ್ತ ರಾಯಚೂರ ಹಾಗೂ ತಂಬಾಕು ಮುಕ್ತ ಯುವ ಅಭಿಯಾನ 4.0 'ಜಾಗೃತಿ ನಡಿಗೆ' ಯನ್ನು ಉದ್ಘಾಟಿಸಿ ಮಾತನಾಡುತ್ತಾ, ದೇಶಾದ್ಯಂತ 2020 ರ ಅಗಷ್ಟ 15 ರಂದು ಅಭಿಯಾನವನ್ನು ಆರಂಭಿಸಿದ್ದು, ರಾಯಚೂರು ಜಿಲ್ಲೆಯ ಜನತೆಗೆ ನಶಾ ಪದಾರ್ಥಗಳ ಸೇವನೆಯಿಂದಾಗುವ ಹಾನಿ, ದುಷ್ಪರಿಣಾಮಗಳ ಕುರಿತು ನಗರ, ಗ್ರಾಮಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ, ಯುವಕರಿಗೆ ಜಾಗೃತಿ ನೀಡಲಾಗುತ್ತಿದ್ದು, ಇದನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವ ಜೊತೆಗೆ ಇವುಗಳ ಸೇವನೆಯಿಂದ ಆರೋಗ್ಯ ಮೇಲೆ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟುವ ದಿಶೆಯಲ್ಲಿ ಹಾಗೂ ಯುವಜನತೆಗೆ ನಶಾ ಪದಾರ್ಥಗಳ ಸೇವನೆಯಿಂದ ಆರೋಗ್ಯ ಸಮಸ್ಯೆಗಳಾದ ಕ್ಯಾನ್ಸರ್ (ವಿಶೇಷವಾಗಿ ಶ್ವಾಸಕೋಶ ಮತ್ತು ಬಾಯಿ ಕ್ಯಾನ್ಸರ್), ಲಿವರ್ ಸಿರೋಸಿಸ್, ಹೃದಯಾಘಾತ, ಪಾರ್ಶ್ವವಾಯು, ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳಾದ ಖಿನ್ನತೆ, ಮಾನಸಿಕ ಅಸ್ವಸ್ಥತೆ, ಆತ್ಮಹತ್ಯೆಯಂತ ಪ್ರಯತ್ನಗಳಿಗೆ ಒಳಗಾಗುತ್ತಾರೆ.

ಅಲ್ಲದೆ ನಶಾ ಪದಾರ್ಥಗಳ ಅಮಲಿನಿಂದ ಹಲ್ಲೆ ಮಾಡುವ, ಮನೆಯ ಕೌಟುಂಬದ ಸದಸ್ಯರಿಂದ ನಿರ್ಲಕ್ಷ್ಯಕ್ಕೆ ಒಳಗಾಗುವ, ಆರ್ಥಿಕ ಸಂಕಷ್ಟದ ಸಮಸ್ಯೆಗಳಿಗೆ ಈಡಾಗುವುದನ್ನು ತಡೆಯಲು ಜಾಗೃತಿ ನೀಡೋಣ, ಹಾಗೂ ರಾಯಚೂರಿನಲ್ಲಿ ವ್ಯಸನದಿಂದ ಮುಕ್ತಿ ಪಡೆಯಲು ರಿಮ್ಸ್ ಆಸ್ಪತ್ರೆಯ ಬಿ ಬ್ಲಾಕ್ ರೂಮ್ ನಂಬರ್ 27 ನಲ್ಲಿ ಕೌನ್ಸಿಲಿಂಗ್ ಸಹಾಯ ಪಡೆಯುಲು ಮಾಡಲಾದ ವ್ಯವಸ್ಥೆಯ ಹಾಗೂ ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ 14416 ಸದುಪಯೋಗ ಪಡೆಯಲು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶು ಗಿರಿ ಮಾತನಾಡಿ, ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಗಾಂಜಾ ಬಳಕೆ, ಮಾರಾಟದ ಮಾಹಿತಿ ಲಭ್ಯವಾಗಿದ್ದು, ತಕ್ಷಣವೆ ದಾಳಿ ಮಾಡಿ, 138 ಕೇಸ್ ಮಾಡಲಾಗಿದ್ದು, ಮಾರಾಟಗಾರರ ಬಂಧನವನ್ನು ಸಹ ಮಾಡಲಾಗಿದೆ. ನಶಾ ಪದಾರ್ಥಗಳ ಅಮಲಿನಲ್ಲಿ ಕೊಲೆ, ಸುಲುಗೆ, ದೊಂಬಿಯಂತಹ ಕೃತ್ಯಗಳಲ್ಲಿ ಭಾಗಿಯಾಗುವ ಸಾಧ್ಯತೆಗಳು ಇದ್ದು ಸಾರ್ವಜನಿಕರು ಈ ದಿಶೆಯಲ್ಲಿ ನಶಾ ಪದಾರ್ಥಗಳ ಬಳಕೆ, ಮಾರಾಟದಿಂದ ದೂರವಿರಲು ವಿನಂತಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ಎಲ್ಲರಿಗೂ ಅಭಿನಂದಿಸಿರು. ಈ ಸಂದರ್ಭದಲ್ಲಿ ರಿಮ್ಸ್ ಅಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸ ಡಾ ವಿಜಯಶಂಕರ, ರಿಮ್ಸ್‌ನ ಪ್ರಾಂಶುಪಾಲರಾದ ಡಾ ರಾಹುಲ್ ಸಿ ಕೀರ್ತೆ, ನವೋದಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ ಗುರುದತ್ತ ಎಸ್ ಪವಾರ್, ಎ.ಎಮ್.ಇ ದಂತ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ ಸೋಮನಾಥ ರೆಡ್ಡಿ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಾ ಗಣೇಶ್ ಕೆ, ಡಾ ಶಾಕೀರ್ ಮೋಯಿನುದ್ದೀನ್, ಡಾ ಶಿವಕುಮಾರ್ ನಾರಾ, ಡಾ ಚಂದ್ರಶೇಖರಯ್ಯ, ಡಾ ಅಮೃತ್ ಹುಕ್ಕೇರಿ, ತಜ್ಞ ವೈದ್ಯ ಡಾ ಬಸವರಾಜ್ ಎಮ್ ಪಾಟೀಲ್, ತಾಲೂಕಾ ಆರೋಗ್ಯಾಧಿಕಾರಿ ಡಾ ಲಕ್ಷ್ಮೀಕಾಂತ, ಮನೋರೋಗ ತಜ್ಞ ಡಾ ಮನೋಹರ ಪತ್ತಾರ, ಗ್ರೀನ್ ರಾಯಚೂರುನ ರಾಜೇಂದ್ರ ಶಿವಾಳಿ, ನಂದಿನಿ ನರ್ಸಿಂಗ್ ಕಾಲೇಜ್ ಟ್ಯೂಟ–ರ್ ಸೋನಿ, ಅಭಿನಯ ಕೆ, ಎನ್‌ಎಸ್‌ಎಸ್ ಅಧಿಕಾರಿ ಸಂತೋಷ್ ಕುಮಾರ, ಸೇರಿದಂತೆ ವೈದ್ಯಾಧಿಕಾರಿಗಳು, ಪೊಲೀಸ್ ಸಿಬ್ಬಂದಿ, ವೈದ್ಯ ವಿದ್ಯಾರ್ಥಿಗಳು, ಆರೋಗ್ಯ ಶಿಕ್ಷಣಾಧಿಕಾರಿಗಳು, ಬಿಹೆಚ್‌ಇಓ, ಪಿಹೆಚ್‌ಸಿಓ ಹೆಚ್‌ಐಓ, ಎಲ–ಟಿಓ, ಫಾರ್ಮಸಿಸ್ಟ್, ಅಶಾ ಕಾರ್ಯಕರ್ತೆಯರು, ಸೇ–ರಿದಂತೆ ಅಧಿಕಾರಿ ಸಿಬ್ಬಂದಿ ವರ್ಗದವರು ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಇನ್ಫಂಟ್ ಜೀಸಸ್ ಶಾಲೆಯಲ್ಲಿ ಮಾದಕ ವಸ್ತುಗಳ ವಿರುದ್ಧ ಪೊಲೀಸ್ ಜಾಗೃತಿ ಅಭಿಯಾನ

ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿದ ನೇತಾಜಿ ನಗರ ಪೊಲೀಸರು ಹಾಗೂ ಂಓಖಈ ತಂಡ

ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಇಂದಿನ ಯುವಜನತೆ ಮತ್ತು ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗುವುದನ್ನು ತಡೆಗಟ್ಟುವ ಹಾಗೂ ಮಾದಕ ವಸ್ತು ಮುಕ್ತ ಸಮಾಜ ನಿರ್ಮಿಸುವ ಉದ್ದೇಶದಿಂದ ನೇತಾಜಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಇನ್ಫಂಟ್ ಜೀಸಸ್ ಶಾಲೆಯಲ್ಲಿ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ನೇತಾಜಿ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಕಖಖ) ಹಾಗೂ ಂಓಖಈ (ಂಟಣು ಓಚಿಡಿ–ಛಿಠಣುಛಿ ಖಿಚಿಳಿ ಈಠಡಿಛಿಜ) ಪೊಲೀಸ್ ತಂಡದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ಗಂಭೀರ ದುಷ್ಪರಿಣಾಮಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಮಾದಕ ವಸ್ತುಗಳ ಸೇವನೆಯು ಕೇವಲ ಒಬ್ಬ ವ್ಯಕ್ತಿಯ ಆರೋಗ್ಯಕ್ಕೆ ಮಾತ್ರವಲ್ಲದೆ, ಆತನ ಕುಟುಂಬ, ಶಿಕ್ಷಣ, ಸಾಮಾಜಿಕ ಗೌರವ ಹಾಗೂ ಭವಿಷ್ಯದ ಮೇಲೂ ಗಂಭೀರ ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

ವಿದ್ಯಾರ್ಥಿ ಜೀವನವು ಭವಿಷ್ಯದ ಬದುಕಿಗೆ ಭದ್ರ ಬುನಾದಿಯಾಗಿದ್ದು, ಈ ಹಂತದಲ್ಲಿ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ದುಶ್ಚಟಗಳಿಗೆ ಬಲಿಯಾಗದೆ ಕ್ರೀಡೆ, ಶಿಕ್ಷಣ, ಸಾಂಸ್ಕೃತಿಕ ಚಟುವಟಿ–ಕೆ ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಪೊಲೀಸ್ ಅಧಿಕಾ–ರಿಗಳು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಇಂತಹ ಜಾಗೃತಿ ಕಾರ್ಯಕ್ರಮಗಳ ಮೂಲಕ ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಮಾದಕ ವಸ್ತುಗಳ ಅಪಾಯದ ಬಗ್ಗೆ ಅರಿವು ಮೂಡಿಸುವುದು ಅತ್ಯಂತ ಅಗತ್ಯವಾಗಿದೆ. ವಿದ್ಯಾರ್ಥಿಗಳು ಜಾಗೃತರಾದರೆ ಕುಟುಂಬ ಮತ್ತು ಸಮಾಜದಲ್ಲಿಯೂ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸಲು ಸಾಧ್ಯವಾಗುತ್ತದೆ ಎಂಬ ಸಂದೇಶವನ್ನು ಕಾರ್ಯಕ್ರಮ ಸಾರಿತು.

ಕಾರ್ಯಕ್ರಮದಲ್ಲಿ ನೇತಾಜಿ ನಗರ ಪೊಲೀಸ್ ಠಾಣೆಯ ಕಖಖ, ಂಓಖಈ ಪೊಲೀಸ್ ತಂಡದ ಸಿಬ್ಬಂದಿ, ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ನೀಡಿದ ಪ್ರಮುಖ ಸಂದೇಶಗಳು:

* **ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳು.**
* **ಮಾದಕ ವಸ್ತುಗಳ ವ್ಯಸನದಿಂದ ಶಿಕ್ಷಣ ಮತ್ತು ಭವಿಷ್ಯದ ಮೇಲೆ ಉಂಟಾಗುವ ದುಷ್ಪ–ರಿಣಾಮಗಳು.**
* **ಸ್ನೇಹಿತರ ಒತ್ತಡ ಹಾಗೂ ಕೆಟ್ಟ ಸಹವಾಸದಿಂದ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗದಂತೆ ಎಚ್ಚರಿಕೆ.**
* **ಮಾದಕ ವಸ್ತುಗಳ ಮಾರಾಟ, ಸಾಗಾಟ ಮತ್ತು ಬಳಕೆಯಂತಹ ಕಾನೂನುಬಾಹಿರ ಚಟುವಟಿಕೆಗಳಿಂದ ದೂರವಿರುವುದು.**
* **ಮಾದಕ ವಸ್ತುಗಳ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸರಿಗೆ ಅಥವಾ ಸಂಬಂಧಪಟ್ಟ ಅಧಿಕಾ–ರಿಗಳಿಗೆ ತಿಳಿಸುವುದು.**

ಜಾಗೃತ ವಿದ್ಯಾರ್ಥಿಗಳು ವ್ಯಸನಮುಕ್ತ ಯುವಜನತೆ ಆರೋಗ್ಯವಂತ ಸಮಾಜ.

ಮಸ್ಕಿ ತಾಲೂಕಿನ ಬೆಲ್ಲದಮರಡಿಯ ವೆಂಕಣ್ಣ ಅವರಿಂದ ಕಾರುಣ್ಯಾಶ್ರಮಕ್ಕೆ ಧನ ಸಹಾಯ

ನೈಜ್ಯ ದೆಸೆ ನ್ಯೂಸ್



ಸಿಂಧನೂರು: ನಗರದ ಸಂಚಾರಿ ಪೊಲೀಸ್ ಠಾಣೆಯ ಪಿ.ಎಸ್.ಐ. ಸುವಾರ್ತ ರಮೇಶ ಅವರು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್(ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಯದಾತುರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿ ಆತ್ಮಸ್ಥೈರ್ಯ ತುಂಬಿದರು.

ಇದೇ ಸಂದರ್ಭದಲ್ಲಿ ಮಸ್ಕಿ ತಾಲೂಕಿನ ಬೆಲ್ಲದಮರಡಿ ಗ್ರಾಮದ ವೆಂಕಣ್ಣ ತಂ. ದಿ. ಹನುಮಂತ್ರಾಯ ಅಸರಡ್ಡಿ 75 ವರ್ಷದ ಇವರು ಆಶ್ರಮದ ನಿರ್ವಹಣೆಗಾಗಿ ಆಶ್ರಮಕ್ಕೆ ಒಂದು ಲಕ್ಷ ರೂಪಾಯಿಗಳ ನಗದನ್ನು ಸಹಾಯ ಮಾಡಿ ಮಾನವೀಯತೆ ಮೆರೆದರು. ಇದೇ ಕಾರ್ಯಕ್ರಮದಲ್ಲಿ ದಿ. ಸುಂಕವಲ್ಲಿ ಹಮ್ಮಿರಾಜು ಸಾ. ಬೂದಿವಾಳ ಕ್ಯಾಂಪ್ ಇವರ ಧರ್ಮಪತ್ನಿಯವರಾದ ಸುಂಕವಲ್ಲಿ ವರಲಕ್ಷ್ಮಿ ಕಾರುಣ್ಯ ದತ್ತಿ ಧರ್ಮದರ್ಶಿಗಳಾಗಿ ಆಶ್ರಮಕ್ಕೆ ಸಹಾಯ ಸೌಜನ್ಯವನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಸಿಂಧನೂರು ಸಂಚಾರಿ ಪೊಲೀಸ್ ಠಾಣೆಯ ಪಿ.ಎಸ್.ಐ. ಗಳಾದ ಸುವಾರ್ತ ರಮೇಶ ಇವರಿಗೆ ಆಶ್ರಮದ ವತಿಯಿಂದ ನೆನಪಿನ ಕಾಣಿಕೆ ವಿತರಿಸಲಾಯಿತು.

ನಂತರ ಆಶ್ರಮಕ್ಕೆ ಸಹಾಯ ಸೌಜನ್ಯ ಮಾಡಿದ ವೆಂಕಣ್ಣ ತಂ. ದಿ. ಹನುಮಂತ್ರಾಯ ಆಸರಡ್ಡಿ ಬೆಲ್ಲದಮರಡಿ ಹಾಗೂ ವರಲಕ್ಷ್ಮಿ ಸುಂಕವಲ್ಲಿ ಸಾ. ಬೂದಿವಾಳ ಕ್ಯಾಂಪ್ ಇವರುಗಳನ್ನು ಆಶ್ರಮದ ವತಿಯಿಂದ ಗೌರವಿಸಲಾಯಿತು. ನಂತರ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಸುವಾರ್ತ ರಮೇಶ ಮಾತನಾಡಿ ಮನುಷ್ಯ ಮನುಷ್ಯನನ್ನೇ ತಿರಸ್ಕೃತಗೊಳಿಸುವ ಈಗಿನ ಕಾಲದಲ್ಲಿ ಕಾರುಣ್ಯ ಆಶ್ರಮವು ಮನುಷ್ಯತ್ವದ ಮಂದಿರವಾಗಿದೆ. ಇಂತಹ ಸೇವೆಗೆ ಇಂದು ಇಬ್ಬರು ಮಾದಾನಿಗಳು ಮಾಡಿರುವ ಕಾರ್ಯ ಭಗವಂತನ ಪ್ರೀತಿಗೆ ಪಾತ್ರವಾಗಿದೆ. ಸ್ವಾರ್ಥದ ಈ ಜಗತ್ತಿನಲ್ಲಿ ಸಾಮಾನ್ಯ ಅರ್ಚಕರಾಗಿ ವೇ.ಮೂ. ಅಮರಯ್ಯ ಸ್ವಾಮಿಯವರು ಕಾರುಣ್ಯ ಸಂಸ್ಥೆಯನ್ನು ಹುಟ್ಟು ಹಾಕಿದ್ದು ಸಮಾಜ–ಕ್ಕೆ ಮಾದರಿಯಾಗಿದೆ. ಇಂತಹ ಸೇವೆ ಸಮಾಜಕ್ಕೆ ಒದಗಿಸುತ್ತಿರುವ ಈ ಸಂಸ್ಥೆಗೆ ನಾನು ವೈಯಕ್ತಿಕವಾಗಿ ಮತ್ತು ನಮ್ಮ ಇಲಾಖೆಯಿಂದ ಕೈಲಾದಷ್ಟು ಸಹಾಯ ಮಾಡುತ್ತೇನೆ. ನಾಡಿನ ಸಮಸ್ತ ನಾಗ–ರಿಕರ ಸಹಾಯದಿಂದ ಮಾಡುತ್ತಿರುವ ಈ ಕಾರ್ಯ ಅದೆಷ್ಟೋ ಅನಾಥ ಜೀವಿಗಳಿಗೆ ಸುಂದರ ಬದುಕು ಕಟ್ಟಿಕೊಟ್ಟಿದೆ. ಇ ಸೇವಾ ಕಾರ್ಯ ಮಾಡುತ್ತಿರುವ ಕಾರುಣ್ಯ ಕುಟುಂಬಕ್ಕೆ ನಾನು ವೈಯಕ್ತಿಕವಾಗಿ ಧನ್ಯವಾದಗಳು ತಿಳಿಸುತ್ತಿದ್ದೇನೆ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ನಂತರ ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಶಾಂಭವಿ ಪುಣ್ಯಾಶ್ರಮದ ವೇ. ಮೂ. ವೀರೇಶ ಯಡಿಯೂರುಮಠ ಮಾತನಾಡಿ ನಮಗೆ ಕಾರುಣ್ಯ ಆಶ್ರಮಕ್ಕೆ ಪೊಲೀಸ್ ಇಲಾಖೆಯಿಂದ ನಿರಂತರ ಸಹಾಯ ಸಹಕಾರ ದೊರೆಯುತ್ತಿದ್ದು ನಮ್ಮನ್ನು ಇನ್ನೂ ಹೆಚ್ಚಿನ ಸೇವೆ ಮಾಡಲು ಪ್ರೋತ್ಸಾಹಿಸಿದೆ. ಸಮಾಜದ ಅದೆಷ್ಟೋ ಟಿಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳನ್ನೇ ಸವಾಲನ್ನಾಗಿ ಸ್ವೀಕಾರ ಮಾಡಿ ಚನ್ನಬಸಯ್ಯನವರ ಈ ಅಂತರಾಳದ ಆತ್ಮಸಾಕ್ಷಿಯ ಸೇವೆಗೆ ಸಹಾಯ ಸಹಕಾರ ಮಾಡುವಂತ ದಾನಿಗಳೇ ನಡೆದಾಡುವ ದೇವರುಗಳಾಗಿದ್ದಾರೆ ಎಂದು ಆಶೀರ್ವಚನ ನೀಡಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಿಂಧನೂರಿನ ಪಿ.ಡಬ್ಲ್ಯೂ.ಡಿ.ಕ್ಯಾಂಪಿನ ಪೀಠಾಧಿಪತಿಗಳಾದ ವೇ. ಮೂ. ವೀರೇಶ ಯಡಿಯೂರು ಮಠ ಸಾನಿಧ್ಯ ವಹಿಸಿದ್ದರು ಈ ಕಾರ್ಯಕ್ರಮದಲ್ಲಿ ಮಹಾದಾನಿಗಳಾದ ವೆಂಕಣ್ಣ ಅಸರೆಡ್ಡಿ ಬೆಲ್ಲದಮರಡಿ. ಸುಂಕವಲ್ಲಿ ವರಲಕ್ಷ್ಮಿ ಬೂದಿವಾಳ ಕ್ಯಾಂಪ್. ನಾರಾಯಣಪ್ಪ ಮಾಡಸಿರವಾರ ಗೌರವಾಧ್ಯಕ್ಷರು ಶ್ರೀಮತಿ ಮಲ್ಲಮ್ಮ ಮಾಡಸಿರವಾರ ಸಾಮಾಜಿಕ ಸಾಂಸ್ಕೃತಿಕ ಸೇವಾ ಟ್ರಸ್ಟ್. ಸೀತಾರಾಮಯ್ಯ ಬೂದಿವಾಳ ಕ್ಯಾಂಪ್. ಶರಣಯ್ಯ ಸ್ವಾಮಿ ಆದಾಪುರ. ಅಮರೇಗೌಡ ಆದಾಪುರ. ಹಾಗೂ ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳಾದ ಜಗದೀಶ. ಪಂಪಾಪತಿ. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮ–ರಿಯಪ್ಪ. ವಿದ್ಯಾಶ್ರೀ. ಶಂಕ್ರಮ್ಮ ಶರಣ ಸ್ವಾಮಿ. ಬಸವ ಸ್ವಾಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

ವಚನ ದರ್ಶನ

ಭವಬಂಧನ ಭವಪಾಶವಾದ ಕಾರಣವೇನಯ್ಯಾ?ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ,ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,ಶಿವಶರಣರ ಮನನೋಯಿಸಿ,ಭಕ್ತಿಹೀನನಾಗಿ ಕರಸ್ಥಲದ ಲಿಂಗವ ಮರೆದೆನಾಗಿಈ ಬವಣೆ ಬಂದಿತಲ್ಲದೆ,ಅದೆಲ್ಲಿಯದೊ ಪ್ರಮಥರಾಣೆ,ಮಹಾದಾನಿಯಾದ ನಮ್ಮ ಕೂಡಲಸಂಗಮದೇವಯ್ಯಾ,ನಿಮ್ಮ ಶರಣರ ಸೇವೆಗೆ ಮರಳಿ ಹುಟ್ಟಿಸಿದೆಡೆ ಸಾಲದೆ?
ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಅರ್ಥಗರ್ಭಿತ ವಚನಗಳಲ್ಲಿ ಒಂದಾಗಿದೆ.

ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಮನುಷ್ಯನಿಗೆ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ಬಂಧನ ಹಾಗೂ ಪಾಶ ಹಗ್ಗ ಬೇಡಿ ಆಗಿ ಕಾಡಲು ಕಾರಣವೇನು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ
ಇದಕ್ಕೆ ಅವರೇ ಉತ್ತರಿಸುತ್ತಾ, "ನಾವು ನಮ್ಮ ಹಿಂದಿನ ಜನ್ಮಗಳಲ್ಲಿ ಭಗವಂತನನ್ನು, ಲಿಂಗವನ್ನು ಮರೆತುಬಿಟ್ಟಿವಿ" ಎನ್ನುತ್ತಾರೆ.

ಹಿಂದಣ ಸಿರಿಯಲ್ಲಿ ಜಂಗಮನ ಮರೆದೆನಾಗಿ ನಮಗೆ ಹಿಂದಿನ ಜನ್ಮದಲ್ಲಿ ಸಿರಿ–ಸಂಪತ್ತು ಇದ್ದಾಗ, ಆ ಹಮ್ಮಿನಲ್ಲಿ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಜಂಗಮರನ್ನು (ಶಿವಶರಣರನ್ನು ಅಥವಾ ಸತ್ಪುರುಷರನ್ನು) ಮರೆತೆವು ಅಥವಾ ಅವರನ್ನು ನಿಂದಿಸಿದೆವು. ಈ ಅಹಂಕಾರ ಮತ್ತು ಮರೆವೇ ನಮ್ಮ ಇಂದಿನ ದುಃಖ ಹಾಗೂ ಸಂಸಾರದ ಬಂಧನಕ್ಕೆ ಮುಖ್ಯ ಕಾರಣ.

ಅರಿದೋಡೀ ಸಂಸಾರವ ಹೊದ್ದಲೀವನೆ
ಕೂಡಲಸಂಗಮದೇವಾ!
ಒಮ್ಮೆ ನಮಗೆ ಈ ಸತ್ಯದ ಅರಿವಾದರೆ (ನಾವು ಮಾಡಿದ ತಪ್ಪುಗಳ ಅರಿವಾಗಿ, ಭಗವಂತ ಮತ್ತು ಸತ್ಪುರುಷರ ಮಹತ್ವ ತಿಳಿದರೆ), ಓ ಕೂಡಲಸಂಗಮದೇವಾ, ಈ ಮಾಯೆಯ ಸಂಸಾರವು ನಮ್ಮನ್ನು ಮತ್ತೆ ಕಾಡಲು ಸಾಧ್ಯವೇ? ಇಲ್ಲ, ಖಂಡಿತಾ ನಾವು ಈ ಬಂಧನದಿಂದ ಮುಕ್ತರಾಗುತ್ತೇವೆ.

ಸಾರಾಂಶ ಸಂಪತ್ತು ಮತ್ತು ಅಧಿಕಾರ ಬಂದಾಗ ದೇವನನ್ನೂ, ಸಮಾಜವನ್ನೂ ಮರೆಯಬಾರದು. ಅಹಂಕಾರವನ್ನು ಬಿಟ್ಟು ಅರಿವಿನಿಂದ ಬದುಕಿದರೆ ಮಾತ್ರ ಭವಬಂಧನದಿಂದ ಮುಕ್ತಿ ಪಡೆಯಬಹುದು ಎಂಬುದು ಈ ವಚನದ ಸಂದೇಶವಾಗಿದೆ. ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ–ಸಿಂಧನೂರು. 998094144

ಕರ್ನಾಟಕಕ್ಕೆ 314 ರನ್ ಇನ್ನಿಂಗ್ಸ್ ಗೆಲುವು, ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಶ್ರೇಯಸ್ ಪಡೆ

❑ ನೈಜ್ಯ ದೆಸೆ ನ್ಯೂಸ್

ಗುವಾಹಟಿ: ಅಸ್ಸಾಮ್ ವಿರುದ್ಧ 314 ರನ್ ಹಾಗೂ ಇನ್ನಿಂಗ್ಸ್ ಗೆಲುವು ಸಾಧಿಸಿದ ಕರ್ನಾಟಕ ತಂಡವು 16 ಅಂಕಗಳೊಂದಿಗೆ ಬಿ ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ದ್ವಿತೀಯ ಇನ್ನಿಂಗ್ಸ್‌ನಲ್ಲಿ 442 ರನ್‌ಗಳ ಹಿನ್ನೆಡೆ ಅನುಭವಿಸಿದ್ದ ಅಸ್ಸಾಮ್ ನಾಯಕ ದಿನೇಶ್ ದಾಸ್‌ರವರ ಅರ್ಧಶತಕ (50ರನ್, 8 ಬೌಂಡರಿ)ದ ನೆರವಿದ್ದರೂ, 128 ರನ್‌ಗಳಿಗೆ ಸರ್ವಪತನ ಕಂಡಿದೆ.



ಕರ್ನಾಟಕ ಪರ ನಾಯಕ ಶ್ರೇಯಸ್ ಗೋಪಾಲ್ (39ಕ್ಕೆ 4), ಶಿಖರ್ ಶೆಟ್ಟಿ (28ಕ್ಕೆ 3) ಅಸ್ಸಾಮ್ ಆಟಗಾರರನ್ನು ಬೆಂಬಿಡದಂತೆ ಕಾಡಿದರೆ, ವಿದ್ವತ್ ಕಾವೇರಪ್ಪ, ಮನ್ವತ್‌ಕುಮಾರ್ ಎಲ್. ಹಾಗೂ ರಿತೇಶ್ ಭಟ್ಕಲ್ ತಲಾ 1 ವಿಕೆಟ್ ಪಡೆದರು. ಇಂದು ಬೆಳಗ್ಗೆ ಆಟ ಆರಂಭಿಸಿದ ಕರ್ನಾಟಕ ಅನ್ವೀಶ್ ಕೆ.ವಿ. (145ರನ್) ಹಾಗೂ ಮನ್ವತ್‌ಕುಮಾರ್ (100ರನ್) ಅವರ ಆಕರ್ಷಕ ಶತಕಗಳ ನೆರವಿನಿಂದ 577/6 ಬೃಹತ್ ಮೊತ್ತ ಕಲೆಹಾಕಿತು. ಸಂಕ್ಷಿಪ್ತಸ್ಕೋರ್: ಅಸ್ಸಾಮ್ ಮೊದಲ ಇನ್ನಿಂಗ್ಸ್ : 135/10, ದ್ವಿತೀಯ ಇನ್ನಿಂಗ್ಸ್ : 128/10 ಕರ್ನಾಟಕ ಮೊದಲ ಇನ್ನಿಂಗ್ಸ್ : 577/6 ಡಿಕ್ಲೇರ್ಡ್

ಗಾಣದಾಳ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ತಾಲೂಕು ಬದಲಾವಣೆ ಕುರಿತು ನ.7ರಂದು ಗ್ರಾಮಸಭೆ

ಅರಕೇರಾ ತಾಲೂಕಿನಲ್ಲೇ ಮುಂದುವರಿಸಬೇಕೇ ಅಥವಾ ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸಬೇಕೇ ಎಂಬ ಬಗ್ಗೆ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹ

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿಗೆ ಒಳಪಟ್ಟಿರುವ ಗಾಣದಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವಂತೆ ಗ್ರಾಮಸ್ಥರು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ನವೆಂಬರ್ 7ರಂದು ಗ್ರಾಮಸಭೆ ಆಯೋಜಿಸಲಾಗಿದೆ.

ಗಾಣದಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗರಿಕರು ಪ್ರತಿಭಟನೆ ನಡೆಸಿ, ದಿನಾಂಕ 12–10–2026ರಂದು ಸಲ್ಲಿಸಿದ ಮನವಿ ಪತ್ರದ ಮೇರೆಗೆ ಅರಕೇರಾ ಗ್ರೇಡ್–2 ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರ ನೇತೃತ್ವದಲ್ಲಿ ಗ್ರಾಮಸಭೆ ನಡೆಸಲು ನಿರ್ಧರಿಸಲಾಗಿದೆ. ನವೆಂಬರ್ 7ರಂದು ಬೆಳಿಗ್ಗೆ 11 ಗಂಟೆಗೆ ಗಾಣದಾಳ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಸಭೆ ನಡೆಯಲಿದ್ದು,





ತಹಶೀಲ್ ಕಾರ್ಯಾಲಯ ಅರಕೇರಾ ತಾಲೂಕು ಅರಕೇರಾ ಜಿಲ್ಲೆ, ರಾಯಚೂರು -584111
OFFICE OF THE TAHSILDAR ARAKERA TALUK ARAKERA DISTRICT RAICHUR-584111
::ಗ್ರಾಮ ಸಭೆಯ ಸೂಚನಾ ಪತ್ರ::
ತಹಶೀಲ್ದಾರ್ ಗ್ರೇಡ್-2 ಅರಕೇರಾ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಅರಕೇರಾ ತಾಲೂಕಿನಲ್ಲಿ ಮುಂದುವ–ರಿಸಬೇಕೇ ಅಥವಾ ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸಬೇಕೇ ಎಂಬ ಕುರಿತು ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ.
ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಸ್ಥರು ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ತಹಶೀಲ್ದಾರ್ ಕಚೇರಿ ಪ್ರಕಟಣೆಯಲ್ಲಿ ಕೋರಲಾಗಿದೆ.
ಸಭೆಗೆ ಅಗತ್ಯ ಪೊಲೀಸ್ ಬಂದೋಬಸ್ತ್ ಕಲ್ಪಿಸುವಂತೆ ಜಾಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ಹಾಗೂ ಉಪನಿರೀಕ್ಷಕರಿಗೆ ಸೂಚನೆ ನೀಡಲಾಗಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ. ಜಿಲ್ಲಾಧಿಕಾರಿಗಳು ಹಾಗೂ ರಾಯಚೂರು ಸಹಾಯಕ ಆಯುಕ್ತರಿಗೆ ಸಭೆಯ ಕುರಿತು ಮಾಹಿತಿಗಾಗಿ ಪ್ರತಿಯನ್ನು ಸಲ್ಲಿಸಲಾಗಿದೆ.

ಸರ್ಕಾರಿ ಯೋಜನೆಗಳ ಫಲಾನುಭವಿಗಳಿಗೆ ಆಧಾರ್ ಬದಲು ಬಯೋಮೆಟ್ರಿಕ್ಸ್ ಮತ್ತು ವೋಟರ್ ಐಡಿ ಕಡ್ಡಾಯ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಇದುವರೆಗೆ ಆಧಾರ್‌ಸಂಖ್ಯೆಯ ಆಧಾರದಲ್ಲಿ ಪಾವತಿಗಳನ್ನು ಪಡೆಯುತ್ತಿದ್ದ ವಿವಿಧ ಯೋಜನೆಗಳ ಫಲಾನುಭವಿಗಳು ಇನ್ನು ಮುಂದೆ ತಮ್ಮ ಬಯೋಮೆಟ್ರಿಕ್ಸ್ (ಜೈವಿಕ ಗುರುತುಗಳು) ಮತ್ತು ಮತದಾರರ ಗುರುತಿನ ಚೀಟಿ (ವೋಟ–ರ್ ಐಡಿ) ಸಂಖ್ಯೆಗಳನ್ನು ಬಳಸಬೇಕಾಗುತ್ತದೆ ಎಂದು ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ (ಲಾಲನ್ ಸಿಂಗ್) ತಿಳಿಸಿದ್ದಾರೆ.

ಪೀಪಲ್‌ಸ ಪ್ಲಾನ್ ಕ್ಯಾಂಪೇನ್ 2026–27 (ಜನರ ಯೋಜನೆ ಅಭಿಯಾನ 2026–27) ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಾಖಲಾತಿ ಕೇಂದ್ರಗಳ ವ್ಯಾಪಕ ಲಭ್ಯತೆ ಮತ್ತು ಆಧಾರ್ ಕಾರ್ಡ್ ಅನ್ನು ಪಡೆಯುವ ಸುಲಭವು ಫಲಾನುಭವಿಗಳನ್ನು ಪರಿಶೀಲಿಸಲು ಅಸಮರ್ಪಕ ಸಾಧನವಾಗಿದೆ ಎಂದು ತಿಳಿಸಿದರು. ಫಲಾನುಭವಿಗಳಿಗೆ ಪಾವತಿ ಮಾಡಲು ಆಧಾರ್ ಕಾರ್ಡ್ ಇನ್ನು ಮುಂದೆ ಆಧಾರವಾಗಿರುವುದಿಲ್ಲ, ಆದ–ಾರ್–ನೋಂದಣಿ ಕೇಂದ್ರಗಳು ಈಗ ಎಲ್ಲೆಡೆ ಇವೆ. ನೀವು ಪ್ರತಿ ಬೀದಿಯಲ್ಲಿಯೂ ಒಂದನ್ನು ಕಾಣಬಹುದು ಎಂದರು.



ಫಲಾನುಭವಿಗಳ ಪರಿಶೀಲನೆ ಮತ್ತು ಪಾವತಿ ಪ್ರಕ್ರಿಯೆಯಲ್ಲಿ ಬದಲಾವಣೆಯಾಗಲಿದೆ ಎಂದ ಅವರು, ಫಲಾನುಭವಿಗಳನ್ನು ಗುರುತಿಸಲು ಆಧಾರ್‌ಗೆ ಬದಲಾಗಿ, ಇನ್ನು ಮುಂದೆ ಬಯೋಮೆಟ್ರಿಕ್ ದೃಢೀಕರಣ ಮತ್ತು ಮತದಾರರ ಗುರುತಿನ ಚೀಟಿಯಲ್ಲಿರುವ (ಎಪಿಕ್ ಸಂಖ್ಯೆ) ಇಪಿಐಸಿ ಸಂಖ್ಯೆಯನ್ನು ಬಳಸಲಾಗುವುದು ಎಂದು ತಿಳಿಸಿದರು.

ಆದರೆ, ಈ ಪ್ರಸ್ತಾವಿತ ವ್ಯವಸ್ಥೆಯನ್ನು ಯಾವ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ, ಇದನ್ನು ವಿವಿಧ ಸಚಿವಾಲಯ ಗಳು ಮತ್ತು ಅವುಗಳ ಯೋಜನೆಗಳಾದ್ಯಂತ ಜಾ–ರಿಗೊಳಿಸಲಾಗುತ್ತದೆಯೇ ಅಥವಾ ಇದನ್ನು ಹೇಗೆ ಕಾರ್ಯಗತಗೊಳಿಸಲಾಗುತ್ತದೆ ಎಂಬುದರ ಕುರಿತು ಸಿಂಗ್ ಯಾವುದೇ ಸ್ಪಷ್ಟನೆ ನೀಡಿಲ್ಲ.

ಕನ್ನಡ ಮಾತೃಭಾಷೆ ಎಂಬ ಕಾರಣಕ್ಕೆ ಉದ್ಯೋಗ ನಿರಾಕರಿಸುವಂತಿಲ್ಲ : ಸಚಿವ ತಂಗಡಗಿ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕನ್ನಡ ಭಾಷೆಯನ್ನು ನಿರ್ಲಕ್ಷಿಸಿದರೆ ಸಹಿಸುವುದಿಲ್ಲ. ಕನ್ನಡ ಕೇವಲ ಮಾತನಾಡುವ ಭಾಷೆಯಾಗದೆ, ಉದ್ಯೋಗ ಹಾಗೂ ಬದುಕಿಗೆ ಆಸರೆಯಾಗುವ ಅನ್ನದ ಭಾಷೆಯಾಗಬೇಕು. ಕನ್ನಡ ಮಾತೃಭಾಷೆ ಎಂಬ ಕಾರಣಕ್ಕೆ ಉದ್ಯೋಗ ನಿರಾಕರಿಸುವ ಘಟನೆಗಳು ನಡೆದರೆ ಅಂತಹವರ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ್ ಎಸ್. ತಂಗಡಗಿ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚೆಗೆ ಮಹಿಳೆಯೊಬ್ಬರು ಕನ್ನಡ



ಭಾಷೆಯಲ್ಲಿ ತಮ ವ್ಯಕ್ತಿ ಪರಿಚಯ ನೀಡಿದ ಕಾರಣಕ್ಕೆ ಉದ್ಯೋಗ ನೀಡಲು ನಿರಾಕರಿಸಲಾಗಿದೆ ಎಂದು ಆರೋಪಿಸಿರುವ ಘಟನೆ ಗಮನಕ್ಕೆ ಬಂದಿದೆ. ನಮ ಸರ್ಕಾರ ಇಂತಹ ಘಟನೆಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಮುಂದಿನ ದಿನಗಳಲ್ಲಿ ಕನ್ನಡ ಭಾಷೆಯನ್ನು ನಿರ್ಲಕ್ಷಿಸಿ ಕನ್ನಡಿಗರಿಗೆ ಉದ್ಯೋಗ ನಿರಾಕ–ರಿಸುವ ಘಟನೆಗಳು ಮರುಕಳಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಜಾನಪದ ಪರಂಪರೆಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವುದು ಸರ್ಕಾರದ ಬದ್ಧತೆಯಾಗಿದೆ.

ನಾಡಿನ ಮೂಲೆಮೂಲೆಗಳಲ್ಲಿರುವ ಕಲಾವಿದರು, ಸಾಹಿತಿಗಳು ಹಾಗೂ ಪ್ರತಿಭಾವಂತರಿಗೆ ಸೂಕ್ತ ವೇದಿಕೆ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯೋತ್ಸವದಂದು ಕನ್ನಡದ ಬಾವುಟ ಹಾರಿಸಿ, ಘೋಷಣೆಗಳನ್ನು ಕೂಗುವುದಷ್ಟೇ ಕನ್ನಡಾಭಿಮಾನಕ್ಕೆ ಸೀಮಿತವಾಗಬಾರದು. ವರ್ಷದ 365 ದಿನಗಳೂ ಕನ್ನಡವನ್ನು ಪ್ರೀತಿಸಬೇಕು, ಬಳಸಬೇಕು ಹಾಗೂ ಬೆಳೆಸಬೇಕು. ಜಾತಿ, ಧರ್ಮ ಮತ್ತು ಪ್ರದೇಶದ ಭೇದಭಾವಗಳನ್ನು ಮರೆತು ಕನ್ನಡದ ಬಂಧದಲ್ಲಿ ನಾವೆಲ್ಲರೂ ಒಂದಾಗಬೇಕು ಎಂದು ಶಿವರಾಜ್ ತಂಗಡಗಿ ಕರೆ ನೀಡಿದ್ದಾರೆ.

ಸೋರಸ್ ಹಣದಿಂದ ಅರಾಜಕತೆ ಸೃಷ್ಟಿಗೆ ರಾಹುಲ್ ಗಾಂಧಿ ಯತ್ನ : ಬೊಮ್ಮಾಯಿ ಗಂಭೀರ ಆರೋಪ

❑ ನೈಜ್ಯ ದೆಸೆ ನ್ಯೂಸ್

ಹುಬ್ಬಳ್ಳಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೋರಸ್‌ನಿಂದ ಹಣ ಪಡೆದು ಭಾರತದ ಪ್ರಜಾಪ್ರಭುತ್ವ ದುರ್ಬಲಗೊಳಿಸಲು ಹೋರಾಟ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮಾಯಿ ಆರೋಪಿಸಿದರು.ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ರಾಹುಲ್ ಗಾಂಧಿಯವರು ಒಬ್ಬ ಹತಾಶ ರಾಜಕಾರಣಿ.

ತಾವು ಅಪರಾಧ ಮಾಡಿರುತ್ತಾರೆ,ಸರ್ಕಾರಿ ಯೋಜನೆ ನೋಡಿ



ಅದನ್ನು ಇನ್ನೊಬ್ಬರ ಮೇಲೆ ಬಿಂಬಿಸುವಂತಹ ರೂಢಿ ಮಾಡಿಕೊಂಡಿದ್ದಾರೆ. ಸೋರಸ್‌ನಿಂದ ಹಣ ಪಡೆದು ಭಾರತದ ಪ್ರಜಾಪ್ರಭುತ್ವ ದುರ್ಬಲಗೊಳಿಸಲು ಹೋರಾಟ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ವಿದೇಶದಿಂದ ಹಣ ಹರಿದು ಬರುತ್ತಿದೆ. ಆ ಹಣದಿಂದ ನಮ ಪ್ರಜಾಪ್ರಭುತ್ವವನ್ನು ದುರ್ಬಲ ಗೊಳಿಸುವ ಸಲುವಾಗಿ, ಮತ್ತು ಭಾರತದ ಅಖಂಡತೆ, ಏಕತೆಗೆ ದಕ್ಕೆ ತರಲು ಹೇಸದಿರುವಂತ ಕಾರ್ಯಕ್ರಮಗಳನ್ನು ಅದರಲ್ಲಿ ಅಳವಡಿಸಿಕೊಂಡಿರುವಂತದ್ದು ಅತ್ಯಂತ ದುಃಖಕರ ಸಂಗತಿ ಎಂದು ಹೇಳಿದ್ದಾರೆ.

ನಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಒಬ್ಬ ಮೊದಲು ದೇಶಾಭಿಮಾನಿ. ದೇಶಕ್ಕಾಗಿಯೇ ತಮ ಜೀವನವನ್ನು ಮುಡುಪಿಟ್ಟಿರುವಂತ ಪ್ರಧಾನಮಂತ್ರಿಯ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುವುದು ಇಡೀ ಭಾರತ ದೇಶದ ದೇಶಾಭಿಮಾನಿಗಳಿಗೆ ಅವಮಾನ ಮಾಡಿದಂತೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2047ಕ್ಕೆ ವಿಕಸಿತ ಭಾರತ ಮಾಡಬೇಕು ಎಂದು ಸಂಕಲ್ಪ ಮಾಡಿ, ಆತನಿರ್ಭರ ಭಾರತ ಮಾಡಬೇಕೆಂದು ತೀರ್ಮಾನಿಸಿದ್ದಾರೆ. ಅದಕ್ಕೆ ನಾವು ಸಂಪೂರ್ಣ ಬೆಂಬಲವಾಗಿ ನಿಂತು ಭಾರತದ ಸಂವಿಧಾನದ ಪ್ರಜಾಪ್ರಭುತ್ವವನ್ನು ಉಳಿಸಬೇಕು ಎಂದು ಕರೆ ನೀಡಿದ್ದಾರೆ.

ಸೋಮನಮರಡಿ ಗ್ರಾಪಂ ವ್ಯಾಪ್ತಿಯ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಒಮ್ಮತದ ಒತ್ತಾಯ

ಅರಕೇರಾ ತಾಲೂಕು ಕೇಂದ್ರದ ದೂರದ ಪ್ರಯಾಣಕ್ಕೆ ಮುಕ್ತಿ ನೀಡಿ; ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಕೈ ಎತ್ತಿ ಬೆಂಬಲಿಸಿದ ಗ್ರಾಮಸ್ಥರು

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ಅರಕೇರಾ ತಾಲೂಕಿಗೆ ಸೇರ್ಪಡೆಗೊಂಡಿರುವ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಮರಡಿ, ಬಿ.ಆರ್. ಗುಂಡ, ಮ್ಯಾಕಲದೊಡ್ಡಿ, ನಾಗಲಾಪುರ ಹಾಗೂ ಸಂಪತ್‌ರಾಯನದೊಡ್ಡಿ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಬೇಕು ಎಂದು ಐದು ಗ್ರಾಮಗಳ 920ಕ್ಕೂ ಅಧಿಕ ಗ್ರಾಮಸ್ಥರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಬೆಳಗ್ಗೆ 11 ಗಂಟೆಗೆ ಸೋಮನಮರಡಿ ಗ್ರಾಮದಲ್ಲಿ ಅರಕೇರಾ ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಐದು ಗ್ರಾಮಗಳ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಕೈ ಎತ್ತುವ ಮೂಲಕ ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸುವ ಬೇಡಿಕೆಗೆ ಬೆಂಬಲ ಸೂಚಿಸಿದರು.

ಸಭೆಯಲ್ಲಿ ಅರಕೇರಾ ತಹಶೀಲ್ದಾರ್ ಅಮರೇಶ, ತಾಲೂಕು ಪಂಚಾಯಿತಿ ಯೋಜನಾಧಿಕಾರಿ ಅಣ್ಣಾರಾವ್, ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಝುಳಕಿ, ಸೋಮನಮರಡಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮಸ್ಥರಾದ ಬಸಯ್ಯಸ್ವಾಮಿ, ಮಹದೇವ ಯಾದವ್, ವಸಂತ ಕುಮಾರ್ ವಕೀಲರು, ಮೌಲಾಸಾಬ್, ಸಂಗಣ್ಣ, ಬಸವರಾಜ ಗಾಣದಾಳ್ ವಕೀಲರು, ಶಿವು ಪಾಟೀಲ್ ಗಾಣ ದಾಳ್,ಸಾಬಣ್ಣ ಕಮಲದಿನ್ನಿ, ಸಾಬಣ್ಣ ಹೂಗಾರ್, ಸಾಬಣ್ಣ ತಳವಾರ್, ಕ–ರಿಯಪ್ಪ ಮಾಲಿಪಾಟೀಲ್, ಹನುಮಂತ ಬಿಂಗಿ, ಸಾಬಗೌಡ ದುರ್ಗಪ್ಪ, ಬಿ.ಆರ್. ಗುಂಡದ ವೆಂಕಟೇಶ್, ಬಿ.ಆರ್. ಗುಂಡದ ಚನ್ನಬಸವ, ಮ್ಯಾಕಲದೊಡ್ಡಿಯ ನಾಗರಾಜ್, ಶಿವನಗೌಡ ಕಕ್ಕಲದೊಡ್ಡಿ ಸೇರಿದಂತೆ ಐದು ಗ್ರಾಮಗಳ 920ಕ್ಕೂ ಅಧಿಕ ಸಾರ್ವಜನಿಕರು ಉಪಸ್ಥಿತರಿದ್ದರು.



ಜಾಲಹಳ್ಳಿಯಲ್ಲಿ ಅಗತ್ಯ ಮೂಲಸೌಕರ್ಯ:

ಜಾಲಹಳ್ಳಿ ಹೋಬಳಿಯಲ್ಲಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪೊಲೀಸ್ ಠಾಣೆ, ಕಾಲೇಜುಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಪಶು ಚಿಕಿತ್ಸಾಲಯ, ರೈತ ಸಂಪರ್ಕ ಕೇಂದ್ರ, ವಿದ್ಯುತ್ ಕೇಂದ್ರ ಹಾಗೂ ಬ್ಯಾಂಕಿಂಗ್ ಸೌಲಭ್ಯಗಳಿವೆ. ಅಲ್ಲದೆ, ರಾಷ್ಟ್ರೀಯ ಹೆದ್ದಾರಿ 150ಎ ಮತ್ತು 61 ಸೇರಿದಂತೆ ಪ್ರಮುಖ ರಸ್ತೆ ಸಂಪರ್ಕ ವ್ಯವಸ್ಥೆಯೂ ಇದೆ. ಹೀಗಾಗಿ ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಂಡರೆ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಗ್ರಾಮಸ್ಥರು ತಿಳಿಸಿದರು.
ಅರಕೇರಾ ಹೊಸ ತಾಲೂಕು ರಚನೆಯ ಸಂದರ್ಭದಲ್ಲಿ ಗ್ರಾಮಸ್ಥರ ಸಮರ್ಪಕ ಜನಾಭಿಪ್ರಾಯ ಸಂಗ್ರಹಿಸದೆ ಈ ಗ್ರಾಮಗಳನ್ನು ಸೇರ್ಪಡೆಗೊಳಿಸಲಾಗಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಾರ್ವಜನಿಕರು ಅನಗತ್ಯವಾಗಿ ದೂರ ಪ್ರಯಾಣ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಅರಕೇರಾಕ್ಕೆ ತೆರಳಲು ದೂರದ ಸಮಸ್ಯೆ:

ಸೋಮನಮರಡಿ ಗ್ರಾಮವು ಅರಕೇರಾ ತಾಲೂಕು ಕೇಂದ್ರದಿಂದ ಸುಮಾರು 46 ಕಿ.ಮೀ., ಸಂಪತ್‌ರಾಯನದೊಡ್ಡಿ 51 ಕಿ.ಮೀ., ಬಿ.ಆರ್. ಗುಂಡ 47 ಕಿ.ಮೀ., ಮ್ಯಾಕಲದೊಡ್ಡಿ 45 ಕಿ.ಮೀ. ಹಾಗೂ ನಾಗಲಾಪುರ 48 ಕಿ.ಮೀ. ದೂರದಲ್ಲಿವೆ. ಇದರಿಂದ ರೈತರು, ಸಾರ್ವಜನಿಕರು ಹಾಗೂ ಸರ್ಕಾರಿ ಯೋಜನೆಗಳ ಫಲಾನುಭವಿಗಳು ವಿವಿಧ ಕೆಲಸಗಳಿಗಾಗಿ ಅರಕೇರಾಕ್ಕೆ ತೆರಳಿ ಬರಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಸಭೆಯಲ್ಲಿ ತಿಳಿಸಿದರು.

ದೇವದುರ್ಗ ತಾಲೂಕಿನ ಜಾಲಹಳ್ಳಿ ಹೋಬಳಿ ಈ ಗ್ರಾಮಗಳಿಗೆ ಸಮೀಪದಲ್ಲಿದೆ. ಸೋಮನಮರಡಿಯಿಂದ ಸುಮಾರು 6 ಕಿ.ಮೀ. ಹಾಗೂ ಮ್ಯಾಕಲದೊಡ್ಡಿಯಿಂದ ಕೇವಲ 4 ಕಿ.ಮೀ. ಅಂತರದಲ್ಲಿದೆ. ಹೀಗಾಗಿ ಭೌಗೋಳಿಕ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಈ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಈ ಹಿಂದೆಯೇ ಗ್ರಾಪಂ ಠರಾವು ಅಂಗೀಕಾರ:

ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವಂತೆ 24–03–2025ರಂದು ನಡೆದ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಈಗಾಗಲೇ ಠರಾವು ಅಂಗೀಕರಿಸಲಾಗಿದೆ. ಇದೀಗ ಮತ್ತೊಮ್ಮೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ, ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರ ಸಹಿಗಳನ್ನು ಪಡೆದು ಅಧಿಕೃತವಾಗಿ ದಾಖಲಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 4(2)(ಎ) ಹಾಗೂ ಸಂಬಂಧಿತ ಕಾನೂನು ನಿಯಮಗಳ ಅನ್ವಯ ಗ್ರಾಮಗಳ ಭೌಗೋಳಿಕ ಸ್ಥಿತಿಗತಿ, ಸಾರ್ವಜನಿಕರ ಅನುಕೂಲತೆ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಸಂಬಂಧಪಟ್ಟ ಜಿಲ್ಲಾಡಳಿತ ಹಾಗೂ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101